ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

# ಪಟ್ಟಿ – ೦೩

ಒಟ್ಟು ಪ್ರಶ್ನೆಗಳು – ೧೦೧

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತನೆಯ ಅಧಿವೇಶನ**

**ಗುರುವಾರ, ದಿನಾಂಕ : ೦೩ನೇ ಮಾರ್ಚ್, ೨೦೧೬**

---

## ಸಮೂಹ – IV

೧. ಮುಖ್ಯಮಂತ್ರಿಗಳು.

೨. ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು.

೩. ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು.

೪. ಗೃಹ ಸಚಿವರು.

೫. ನಗರಾಭಿವೃದ್ಧಿ ಸಚಿವರು.

೬. ಅಬಕಾರಿ ಮತ್ತು ಮುಜರಾಯಿ ಸಚಿವರು.

---

## ಜಲಮಂಡಳಿ ಆಯುಕ್ತರ ಭ್ರಷ್ಟಾಚಾರ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೬೨ (೨೦೬) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಜಲಮಂಡಳಿಯ ಹಾಲಿ ಅಧ್ಯಕ್ಷರು ಹಾಗೂ ಆಯುಕ್ತರು ತಮ್ಮ ವ್ಯಾಪ್ತಿಯ ಆಡಳಿತದಲ್ಲಿ ಭ್ರಷ್ಟಾಚಾರವನ್ನು ತಡೆಯಲು ವಿಫಲವಾಗಿರುವುದರ ಜೊತೆಗೆ ವರ್ಗಾವಣೆಗೊಂಡ ಇಲಾಖೆಗಳಲ್ಲೆಲ್ಲ ಭೂ ತೆರಿಗೆ ಹಾಗೂ ನೀರಿನ ತೆರಿಗೆಗಳನ್ನು ಹೆಚ್ಚಿಸಿ ಜನ ಸಾಮಾನ್ಯರನ್ನು ಶೋಷಣೆ ಮಾಡುತ್ತಿರುವುದು ನಿಜವಲ್ಲವೇ ;

(ಆ) ಸದರಿ ಅಧಿಕಾರಿಯವರು ಬಿ.ಬಿ.ಎಂ.ಪಿ. ಆಯುಕ್ತರಾಗಿದ್ದ ಅವಧಿಯಲ್ಲಿ ಜನ ಸಾಮಾನ್ಯರ ಮೇಲೆ ಯಾವ ಯಾವ ತೆರಿಗೆಗಳನ್ನು ಹೆಚ್ಚಿಸಿ ಹೆಚ್ಚಿನ ಹೊರೆ ಮಾಡಿದ್ದರು ;

(ಇ) ಈಗ ಜಲಮಂಡಳಿ ಮುಖ್ಯಸ್ಥರಾಗಿ ಜನ ಸಾಮಾನ್ಯರ ಕುಡಿಯುವ ನೀರು ಹಾಗೂ ಪ್ರರೋಟಾ ಚಾರ್ಜ್ಸ್ (PRORATA Charges) ಹೆಸರಿನಲ್ಲಿ ಎಷ್ಟು ಪಟ್ಟು ದರಗಳನ್ನು ಹೆಚ್ಚಿಸಿರುತ್ತಾರೆ ಹಾಗೂ ಇನ್ನೆಷ್ಟು ಪಟ್ಟು ಹೆಚ್ಚಿಸಲು ಉತ್ಸುಕರಾಗಿರುತ್ತಾರೆ ; (ಪೂರ್ಣ ವಿವರ ಒದಗಿಸುವುದು)

(ಈ) ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಯಾವ ಯಾವ ವಾರ್ಡ್‌ಗಳಲ್ಲಿ ಯಾವ ಯಾವ ಅಭಿಯಂತರರು ಹಾಗೂ ಅಧಿಕಾರಿ/ನೌಕರರು ಮೂರು ವರ್ಷಕ್ಕಿಂತ ಹೆಚ್ಚು ಅವಧಿಗೆ ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ ;

(ಉ) ಇವರುಗಳು ಕೆಳಹಂತದ ನೌಕರರು ಹಾಗೂ ಗುತ್ತಿಗೆದಾರರೊಂದಿಗೆ ಶಾಮೀಲಾಗಿ ವ್ಯಾಪಕ ಭ್ರಷ್ಠಾಚಾರದಲ್ಲಿ ತೊಡಗಿರುವುದರಿಂದ ಜಲಮಂಡಳಿಗೆ ಪ್ರತಿ ತಿಂಗಳು ಕೋಟ್ಯಾಂತರ ರೂಪಾಯಿಗಳ ನಷ್ಟವಾಗುತ್ತಿದ್ದು, ಅಂತಹವರನ್ನು ಕೂಡಲೇ ಬೇರೆ ಕಛೇರಿಗಳಿಗೆ ವರ್ಗಾಯಿಸಲು ಹಾಗೂ ಆಡಳಿತದಲ್ಲಿ ಪಾರದರ್ಶಕತೆ ತರಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ;

(ಊ) ರಸ್ತೆಯಲ್ಲಿ ಬೋರ್‌ವೆಲ್ ವಾಟರ್ ಪೈಪ್ ಏಳೆದಿರುವುದಾಗಿ ಹಾಲಿ ಕಾವೇರಿ ನೀರಿನ ಬಿಲ್ಲಿನ ಜೊತೆಗೆ ಪ್ರತಿ ಮನೆಗೂ ಶೇ. ೧೦೦ ರಷ್ಟು ಹೆಚ್ಚುವರಿಯಾಗಿ ವಿಧಿಸುತ್ತಾ, ಜಲಮಂಡಳಿ ಅಧಿಕಾರಿಗಳು ಸಾಮಾನ್ಯ ಜನರಿಗೆ ಬರೆ ಎಳೆಯುತ್ತಿರುವುದನ್ನು ಕೂಡಲೇ ನಿಲ್ಲಿಸಲು ಕೈಗೊಂಡ ಕ್ರಮವೇನು ?

## ಬೆಂಗಳೂರು ಜಲಮಂಡಳಿಯಲ್ಲಿ ಹಣ ಸೋರಿಕೆ ಆಗುತ್ತಿರುವ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೬೩ (೭) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಜಲಮಂಡಳಿಯಲ್ಲಿ ಪ್ರತಿದಿನ ೨೫ ಕೋಟಿಗೂ ಹೆಚ್ಚು ಹಣ ಸೋರಿಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ಸೋರಿಕೆಗೆ ಕಾರಣಗಳೇನು ; ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೬೪೪ (೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗಾಗಿ ವಸತಿ ಗೃಹಗಳನ್ನು ನಿರ್ಮಿಸಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಎಷ್ಟು ವಸತಿ ಗೃಹಗಳನ್ನು ಎಲ್ಲಿ ಮತ್ತು ಯಾವ ವರ್ಷದಂದು ನಿರ್ಮಿಸಲಾಗಿದೆ ;

(ಇ) ವಸತಿ ಗೃಹಗಳನ್ನು ಹಂಚಿಕೆ ಮಾಡುವಂತೆ ಕೋರಿ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಅರ್ಜಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಎಷ್ಟು ಜನ ಅರ್ಜಿ ಸಲ್ಲಿಸಿದ್ದಾರೆ ;

(ಈ) ಈಗಾಗಲೇ ಗೃಹಗಳನ್ನು ಹಂಚಿಕೆ ಮಾಡಲಾಗಿದೆಯೇ ; ಇಲ್ಲದಿದ್ದಲ್ಲಿ ಕಾರಣಗಳೇನು ; ಯಾವಾಗ ಹಂಚಿಕೆ ಮಾಡಲಾಗುವುದು ;

(ಉ) ವಸತಿ ಗೃಹಗಳನ್ನು ನಿರ್ಮಿಸಿ ಹಲವು ವರ್ಷಗಳೇ ಕಳೆದಿದ್ದರೂ ಇಲಾಖೆಯ ವಶಕ್ಕೆ ಪಡೆಯದೇ ಇರುವುದು ನಿಜವೇ ; ಹಾಗಿದ್ದಲ್ಲಿ, ವಸತಿ ಗೃಹಗಳನ್ನು ವಶಕ್ಕೆ ಪಡೆಯದೇ ಇರುವುದರಿಂದ ಸರ್ಕಾರಕ್ಕೆ ನಷ್ಟವಾಗಿದ್ದು, ಇದಕ್ಕೆ ಕಾರಣಕರ್ತರ ವಿರುದ್ಧ ಕೈಗೊಂಡಿರುವ ಕ್ರಮಗಳೇನು ?

## ಅಗ್ನಿಶಾಮಕ ದಳದ ವಾಹನ ನಿಲುಗಡೆಗೆ ಸ್ಥಳ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೬೫ (೩೭೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅಗ್ನಿಶಾಮಕ ಸಿಬ್ಬಂದಿ ಮತ್ತು ವಾಹನಗಳ ನಿಲುಗಡೆ ವ್ಯವಸ್ಥೆಗೆ ಸರ್ಕಾರದ ನೀತಿ ನಿಯಮಗಳೇನು ;

(ಆ) ಅಗ್ನಿಶಾಮಕ ದಳದ ವಾಹನ ನಿಲುಗಡೆ ಸ್ಥಳವನ್ನು "ವಿಜಯಪುರ" ನಗರದಿಂದ ೪ ಕಿ.ಲೋ. ಮೀಟರ್ ದೂರ ಸ್ಥಳಾಂತರಿಸಿರುವುದು ಹಾಗೂ ಈ ಜಮೀನನ್ನು ಖಾಸಗಿಯವರಿಗೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಇದಕ್ಕಾಗಿ ಸರ್ಕಾರದಿಂದ ಯಾವ ಕ್ರಮ ಜರುಗಿಸಲಾಗುತ್ತಿದೆ ?

## ವಿಜಯಪುರ ನಗರ ಸಭೆಯನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೬೬ (೯) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಜಯಪುರ ನಗರ ಸಭೆಯನ್ನು ಮಹಾನಗರ ಪಾಲಿಕೆ ದರ್ಜೆಗೆ ಏರಿಸಲಾಗಿದೆಯೇ ;

(ಆ) ಇದ್ದಲ್ಲಿ ಯಾವ ದರ್ಜೆಯ ಮಹಾನಗರ ಪಾಲಿಕೆ ಎಂದು ಪರಿಗಣಿಸಲಾಗಿದೆ ; (ವಿವರ ನೀಡುವುದು)

(ಇ) ಈ ಮಹಾನಗರ ಪಾಲಿಕೆಗೆ ಸರ್ಕಾರದ ನಿಯಮದಂತೆ ಎಷ್ಟು ಹುದ್ದೆಗಳು ಅವಶ್ಯವಿದೆ ; (ಸಂಪೂರ್ಣ ವಿವರ ನೀಡುವುದು)

(ಈ) ಅತೀ ಕಡಿಮೆ ಸಿಬ್ಬಂದಿ ವರ್ಗದಿಂದ ವಿಜಯಪುರ ನಗರದ ಸ್ವಚ್ಛತೆ, ಅಭಿವೃದ್ಧಿ ಕಾಮಗಾರಿಗಳು, ಸಾರ್ವಜನಿಕರಿಗೆ ಮಹಾನಗರ ಪಾಲಿಕೆಯಿಂದ ಆಗಬೇಕಾದ ಕಾರ್ಯಗಳು ತೀವ್ರವಾಗಿ ವಿಳಂಬ ಮತ್ತು ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ವಿಜಯಪುರ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೆ ಏರಿದ ಮೇಲೆ ಅವಶ್ಯವಿರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಮತ್ತು ಪಾಲಿಕೆಯ ದೈನಂದಿನ ಕಾರ್ಯಗಳಿಗೆ ಮತ್ತು ನಗರ ಅಭಿವೃದ್ಧಿಗೆ ಪೂರ್ಣ ಪ್ರಮಾಣದ ಸಿಬ್ಬಂದಿಗಳನ್ನು ತುಂಬಿಕೊಳ್ಳಲು ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತಿದೆ ; ಮತ್ತು ಎಲ್ಲಾ ಹುದ್ದೆಗಳನ್ನು ಪೂರ್ತಿಯಾಗಿ ಎಷ್ಟು ದಿವಸಗಳಲ್ಲಿ ತುಂಬಲು ಸರ್ಕಾರ ನಿರ್ಧರಿಸಿದೆ ?

## ನಗರೋತ್ಥಾನ ಅಭಿವೃದ್ಧಿ ಯೋಜನೆ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೬೭ (ಲ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಜಯಪುರ ಮಹಾನಗರ ಪಾಲಿಕೆಗೆ ನಗರೋತ್ಥಾನ ಅಭಿವೃದ್ಧಿ ಯೋಜನೆ ಮಂಜೂರಾತಿ ಆಗಿದೆಯೇ ;

(ಆ) ಆಗಿದ್ದರೆ, ಯಾವ ವರ್ಷದಲ್ಲಿ ಈ ಯೋಜನೆಯನ್ನು ಕೈಗೊಳ್ಳಲಾಗುತ್ತದೆ ಮತ್ತು ಎಷ್ಟು ಹಂತಗಳಲ್ಲಿ ವಿಜಯಪುರ ನಗರದ ಅಭಿವೃದ್ಧಿಯನ್ನು ಕೈಗೊಳ್ಳಲಾಗುವುದು ;

(ಇ) ನಗರೋತ್ಥಾನ ಅಭಿವೃದ್ಧಿ ಯೋಜನೆಯಡಿಯಲ್ಲಿ ವಿಜಯಪುರ ನಗರದ ಯಾವ ಯಾವ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಹಣ ಎಷ್ಟು ;

(ಈ) ಬಿಡುಗಡೆಯಾದ ಹಣದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; (ವಾರ್ಡ್ ಮತ್ತು ಓಣಿವಾರು ಪೂರ್ಣ ವಿವರವನ್ನು ಒದಗಿಸುವುದು)

(ಉ) ಕಾಮಗಾರಿಗಳನ್ನು ಸರ್ಕಾರದ ದಿಶಾ–ನಿರ್ದೇಶಗಳಂತೆ ಮಾಡಲಾಗಿದೆಯೇ ; (ಮಾಹಿತಿ ನೀಡುವುದು)

(ಊ) ಬಿಡುಗಡೆಯಾದ ಹಣದಲ್ಲಿ ಸದ್ಬಳಕೆ ಮಾಡಿಕೊಂಡ ಹಣ ಎಷ್ಟು ; ಒಂದು ವೇಳೆ ಮಾಡಿಕೊಂಡಿರದಿದ್ದಲ್ಲಿ ಕಾರಣಗಳೇನು ; ಮತ್ತು ಕ್ರಮಗಳೇನು ?

## ಕರ್ನಾಟಕ ಕೇಡರ್‌ನ ಹಿರಿಯ ಐ.ಎ.ಎಸ್. ಅಧಿಕಾರಿಗಳು ಕೇಂದ್ರ ಸೇವೆಗೆ ನಿಯೋಜನೆಗೊಳ್ಳುತ್ತಿರುವ ಕುರಿತು

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೧೬೮ (೧೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಐ.ಎ.ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು ;

(ಆ) ಇದರಲ್ಲಿ ೧೯೭೮ ರಿಂದ ೧೯೮೬ರವರೆಗಿನ ಬ್ಯಾಚ್‌ನಲ್ಲಿ ಕರ್ನಾಟಕ ಕೇಡರ್‌ಗೆ ಆಯ್ಕೆಯಾದ ಐ.ಎ.ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು ;

(ಇ) ೧೯೭೮ ರಿಂದ ೧೯೮೬ರ ಅವಧಿಯಲ್ಲಿ ನೇಮಕಗೊಂಡ ಹಿರಿಯ ಅಧಿಕಾರಿಗಳ ಪೈಕಿ ಕೇಂದ್ರದ ಸೇವೆಗೆ ನಿಯೋಜನೆಗೊಂಡ ಅಧಿಕಾರಿಗಳ ಸಂಖ್ಯೆ ಎಷ್ಟು ;

(ಈ) ಸೇವಾ ಅನುಭವವಿರುವ ಹೆಚ್ಚಿನ ಹಿರಿಯ ಅಧಿಕಾರಿಗಳು ಕೇಂದ್ರದ ಸೇವೆಗೆ ನಿಯೋಜನೆಗೊಳ್ಳುತ್ತಿರುವ ಕಾರಣಗಳೇನು ;

(ಉ) ಕರ್ನಾಟಕದಲ್ಲಿ ಈಗಾಗಲೇ ಐ.ಎ.ಎಸ್. ಅಧಿಕಾರಿಗಳ ಕೊರತೆ ಇದ್ದು, ಅದರಲ್ಲಿ ದಕ್ಷ ಹಿರಿಯ ಐ.ಎ.ಎಸ್. ಅಧಿಕಾರಿಗಳು ಕೇಂದ್ರ ಸೇವೆಗೆ ನಿಯೋಜನೆಗೊಳ್ಳುತ್ತಿರುವುದರಿಂದ ಆಡಳಿತ ಯಂತ್ರದ ಮೇಲೆ ಪರಿಣಾಮ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಳ್ಳುತ್ತಿರುವ ಕ್ರಮಗಳೇನು ?

## ರಾಜ್ಯದ ಅನುದಾನಿತ ಕಾಲೇಜುಗಳಲ್ಲಿ ನಿವೃತ್ತಿಯಿಂದ ತೆರವಾಗಿರುವ ಗ್ರಂಥಪಾಲಕರು ದೈಹಿಕ ಶಿಕ್ಷಣ ನಿರ್ದೇಶಕರು/ಬೋಧಕೇತರ ಸಿಬ್ಬಂದಿ ವರ್ಗದ ಹುದ್ದೆಗಳನ್ನು ಭರ್ತಿಗೊಳಿಸಲು ಅನುಮತಿ ನೀಡುವ ಕುರಿತು

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೧೬೯ (೧೧) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಅನುದಾನಿತ ಪದವಿ ಕಾಲೇಜಗಳಲ್ಲಿ ೨೦೦೧ರ ನಂತರದಲ್ಲಿ ಖಾಲಿಯಾಗಿರುವ ಗ್ರಂಥಾಪಾಲಕರು, ದೈಹಿಕ ಶಿಕ್ಷಣ ನಿರ್ದೇಶಕರು ಹಾಗೂ ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ಮಾಹಿತಿ ನೀಡುವುದು)

(ಆ) ಖಾಲಿಯಾಗಿರುವ ಗ್ರಂಥಪಾಲಕರ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರ ಹುದ್ದೆಗಳ ಭರ್ತಿಗಾಗಿ ಜಾರಿಯಲ್ಲಿರುವ ಸರ್ಕಾರದ ಆರ್ಥಿಕ ಮಿತವ್ಯಯದ ಆದೇಶವನ್ನು ಯಾವ ಕಾಲಮಿತಿಯೊಳಗೆ ತೆರವುಗೊಳಿಸಿ ಭರ್ತಿಗಾಗಿ ಅನುಮತಿ ನೀಡಲು ಸರ್ಕಾರ ಚಿಂತಿಸಿದೆ ;

(ಇ) ದಿನಾಂಕ : ೦೧-೦೩-೨೦೦೧ರ ನಂತರದಲ್ಲಿ ತೆರವಾದ ಬೋಧಕೇತರ ಹುದ್ದೆಗಳನ್ನು ಶಾಶ್ವತ ಅನುದಾನ ರಹಿತ ಹುದ್ದೆಗಳೆಂದು ಪರಿಗಣಿಸಲು ಕಾರಣಗಳೇನು ; ಕಾಲಕ್ರಮೇಣವಾಗಿ ತೆರವಾಗುವ ಎಲ್ಲ ಹುದ್ದೆಗಳು ಶಾಶ್ವತ ಅನುದಾನ ರಹಿತವಾಗುವುದರಿಂದ ಕಾಲೇಜಿನ ಆಡಳಿತ ಮೇಲೆ ತೀವ್ರ ಪರಿಣಾಮ ಬೀರುವುದನ್ನು ಪರಿಗಣಿಸಿ ಕೆಲವು ಹುದ್ದೆಗಳನ್ನಾದರೂ ಅನುದಾನ ಸಹಿತವಾಗಿ ಮುಂದುವರೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಈ) ಅನುದಾನಿತ ಪದವಿ ಕಾಲೇಜುಗಳಿಗೆ ತಲಾ ೧ ಅಥವಾ ೨ ಬೋಧಕೇತರ ಹುದ್ದೆಗಳನ್ನಾದರೂ ಅನುದಾನ ಸಹಿತ ಹುದ್ದೆಗಳೆಂದು ಮುಂದುವರಿಸಿ ಆ ಹುದ್ದೆಗಳಿಗೆ ಸರ್ಕಾರದ ನಿಯಮದಂತೆ ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡಲು ಅವಕಾಶ ಕಲ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಅನುದಾನಿತ ಪದವಿ ಕಾಲೇಜುಗಳಲ್ಲಿನ ಬೋಧಕ ವೃಂದದ ಹುದ್ದೆಗಳನ್ನು ಭರ್ತಿಗೊಳಿಸಲು ಅನುಮತಿ ನೀಡುವ ಕುರಿತು

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :-**

೧೭೦ (೧೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಅನುದಾನಿತ ಪದವಿ ಕಾಲೇಜುಗಳಲ್ಲಿ ಕಳೆದ ೯ ವರ್ಷಗಳಿಂದ ಖಾಲಿಯಾಗಿರುವ ಬೋಧಕ ವೃಂದದ ಹುದ್ದೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ವಿಯಷವಾರು ವಿವರ ನೀಡುವುದು)

(ಆ) ಕೆಲವೊಂದು ಅನುದಾನಿತ ಪದವಿ ಕಾಲೇಜುಗಳಲ್ಲಿ ಕೇವಲ ಒಂದು ಅಥವಾ ಎರಡು ಹುದ್ದೆಗಳು ಮಾತ್ರ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಅನುದಾನಿತ ಪದವಿ ಕಾಲೇಜುಗಳಲ್ಲಿ ಇಲ್ಲಿಯವರೆಗೆ ಖಾಲಿಯಾದ ಬೋಧಕ ವೃಂದದ ಹುದ್ದೆಗಳನ್ನು ಭರ್ತಿಗೊಳಿಸಲು ಸರ್ಕಾರ ಅನುಮತಿ ನೀಡದಿರಲು ಕಾರಣಗಳೇನು ;

(ಈ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ಈಗಾಗಲೇ ದಿನಾಂಕ : ೩೧-೧೨-೨೦೧೨ ರವರೆಗೆ ಖಾಲಿಯಾದ ಬೋಧಕ ವೃಂದದ ಹುದ್ದೆಗಳನ್ನು ಭರ್ತಿಗೊಳಿಸಲು ಅನುಮತಿ ನೀಡಿದ ಮಾದರಿಯಲ್ಲಿಯೇ ಪದವಿ ಕಾಲೇಜುಗಳ ಖಾಲಿ ಹುದ್ದೆಗಳನ್ನು ಭರ್ತಿಗೊಳಿಸಲು ಸರ್ಕಾರ ಅನುಮತಿ ನೀಡಲು ಕ್ರಮ ಕೈಗೊಳ್ಳುವುದೇ ?

## ಹೊಸ ಪಿಂಚಣಿ ಯೋಜನೆ (ಎನ್.ಪಿ.ಎಸ್.)ಯನ್ನು ಕೈಬಿಟ್ಟು ಮೊದಲಿನ ಪದ್ಧತಿಯನ್ನು ಮುಂದುವರೆಸುವ ಕುರಿತು

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೧೭೧ (೧೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಿನಾಂಕ : ೦೧-೦೪-೨೦೦೬ರ ನಂತರ ಜಾರಿಗೆ ಬಂದಿರುವ ಹೊಸ ಪಿಂಚಣಿ ಯೋಜನೆಗೆ ಒಳಪಟ್ಟಿರುವ ಸರ್ಕಾರಿ ನೌಕರರ ಸಂಖ್ಯೆ ಎಷ್ಟು ;

(ಆ) ದಿನಾಂಕ : ೦೧-೦೪-೨೦೦೬ರ ನಂತರ ನೇಮಕಾತಿ ಹೊಂದಿ ಈವರೆಗೆ ಹೊಸ ಪಿಂಚಣಿ ಯೋಜನೆಗೆ ಒಳಪಡದಿರುವ ಅನುದಾನಿತ ಸಂಸ್ಥೆಗಳ ನೌಕರರುಗಳ ಸಂಖ್ಯೆ ಎಷ್ಟು ; ಈ ಯೋಜನೆಯನ್ನು ಈವರೆಗೆ ಅಳವಡಿಸದಿರಲು ಕಾರಣಗಳೇನು ;

(ಇ) ಹೊಸ ಪಿಂಚಣಿ ಯೋಜನೆಗೆ ಒಳಪಟ್ಟ ನೌಕರರುಗಳಲ್ಲಿ ನಿವೃತ್ತಿ/ನಿಧನ ಹೊಂದಿದ ನೌಕರರುಗಳ ಸಂಖ್ಯೆ ಎಷ್ಟು ; ಮೃತ/ನಿವೃತ್ತಿ ಹೊಂದಿದ ನೌಕರರುಗಳಿಗೆ ಸರ್ಕಾರದಿಂದ ನೀಡಲಾಗುವ ಆರ್ಥಿಕ ಸೌಲಭ್ಯಗಳು ಯಾವುವು ಮತ್ತು ಎಷ್ಟು ನೌಕರರಿಗೆ ಈ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ;

(ಈ) ಹೊಸ ಪಿಂಚಣಿ ಯೋಜನೆಯಲ್ಲಿ ಸಾಕಷ್ಟು ಲೋಪದೋಷಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಯೋಜನೆಯು ಸಂಪೂರ್ಣ ಲೋಪದೋಷಗಳಿಂದ ಕೂಡಿರುವುದರಿಂದ, ಇದನ್ನು ಕೈಬಿಡುವಂತೆ ಈಗಾಗಲೇ ನೌಕರರು ಸಂಘಟಿತರಾಗಿ ಹೋರಾಡುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ ;

(ಉ) ಈಗಾಗಲೇ ಆಂಧ್ರಪ್ರದೇಶ ಸರ್ಕಾರ ದಿನಾಂಕ : ೦೧-೦೪-೨೦೦೬ರ ನಂತರ ನೇಮಕಗೊಂಡ ನೌಕರರುಗಳಿಗೆ ಅಳವಡಿಸಿದ ಹೊಸ ಪಿಂಚಣಿ ಯೋಜನೆಯನ್ನು ರದ್ದುಪಡಿಸಿ, ಹಿಂದಿನ ಪದ್ಧತಿಯನ್ನು ಮುಂದುವರೆಸಿದ್ದು, ಅದರಂತೆ ರಾಜ್ಯದ ನೌಕರರುಗಳಿಗೆ ಸಹ ಹಳೆಯ ಪಿಂಚಣಿ ಪದ್ಧತಿಯನ್ನು ಮುಂದುವರೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಬಿ.ಡಿ.ಎ. ವತಿಯಿಂದ ನಿರ್ಮಿಸಲಾದ ನಿವೇಶನ ಫ್ಲಾಟ್ ಮತ್ತು ಹಂಚಿಕೆ

**ಶ್ರೀ ಎಂ. ಶ್ರೀನಿವಾಸ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೭೨ (೬೦) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಐದು ವರ್ಷಗಳ ಅವಧಿಯಲ್ಲಿ ಬೆಂಗಳೂರು ನಗರದಲ್ಲಿ ಬಿ.ಡಿ.ಎ. ವತಿಯಿಂದ ನಿರ್ಮಿಸಲಾದ ನಿವೇಶನಗಳು ಮತ್ತು ಅಪಾರ್ಟ್‌ಮೆಂಟ್‌ಗಳ ಸಂಖ್ಯೆ ಎಷ್ಟು ; ಯಾವ ಯಾವ ಭಾಗಗಳಲ್ಲಿ ನಿರ್ಮಿಸಲಾಗಿದೆ ; (ಪ್ರತ್ಯೇಕವಾದ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)

(ಆ) ನಿರ್ಮಿಸಲಾದ ನಿವೇಶನ ಮತ್ತು ಫ್ಲಾಟ್‌ಗಳ ಹಂಚಿಕೆ ಮಾಡಲಾಗುತ್ತಿದೆಯೇ ; ಇದಕ್ಕೆ ವಿಧಿಸಲಾಗುತ್ತಿರುವ ದರ ಎಷ್ಟು ; ಹಂಚಿಕೆಯಲ್ಲಿ ಅನುಸರಿಸಲಾಗುತ್ತಿರುವ ನಿಯಮಗಳೇನು ? (ಪ್ರದೇಶವಾರು ಪ್ರತ್ಯೇಕ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)

## ಬೆಂಗಳೂರು ನಗರದಲ್ಲಿ ಕಾಮಗಾರಿ ಪೂರ್ಣಗೊಂಡ ಅಪಾರ್ಟ್‌ಮೆಂಟ್‌ಗಳಿಗೆ ಓ.ಸಿ.

**ಶ್ರೀ ಎಂ. ಶ್ರೀನಿವಾಸ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೭೩ (೫೮) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳ ಅವಧಿಯಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಪೂರ್ಣಗೊಂಡ ಅಪಾರ್ಟ್‌ಮೆಂಟ್‌ಗಳ ಸಂಖ್ಯೆ ಎಷ್ಟು ; (ವಿಭಾಗವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)

(ಆ) ಕಾಮಗಾರಿ ಪೂರ್ಣಗೊಂಡ ಅಪಾರ್ಟ್‌ಮೇಂಟ್‌ಗಳಿಗೆ ವಾಸ ದೃಢೀಕರಣ ಪತ್ರವನ್ನು ನೀಡಲು ಬಿ.ಬಿ.ಎಂ.ಪಿ. ಅನುಸರಿಸುತ್ತಿರುವ ಮಾನದಂಡವೇನು ; ಈ ಕುರಿತಾದ ವಿಳಂಬ ನೀತಿಯಿಂದಾಗಿ ಗ್ರಾಹಕರಿಗೆ ಆಗುತ್ತಿರುವ ಅನಾನುಕೂಲವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳು ಏನು ? (ಸಂಪೂರ್ಣ ಮಾಹಿತಿ ಒದಗಿಸುವುದು)

## ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿನ ನೇಮಕಾತಿ ಅಕ್ರಮ

**ಶ್ರೀ ಎಂ. ಶ್ರೀನಿವಾಸ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೭೪ (೬೧) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯದಲ್ಲಿ ಇರುವ ವಿಶ್ವವಿದ್ಯಾಲಯಗಳು ಯಾವುವು ; ಯಾವ ಯಾವ ಭಾಗಗಳಲ್ಲಿ ಈ ವಿಶ್ವವಿದ್ಯಾನಿಲಯಗಳು ಕಾರ್ಯನಿರ್ವಹಿಸುತ್ತಿವೆ ; (ಪ್ರತ್ಯೇಕ ಮಾಹಿತಿ ಒದಗಿಸುವುದು)

(ಆ) ಹಲವು ವಿಶ್ವವಿದ್ಯಾಲಯಗಳಲ್ಲಿ ವಿವಿಧ ಹುದ್ದೆಗಳ ನೇಮಕಾತಿಯಲ್ಲಿ ಸ್ವಜನ ಪಕ್ಷಪಾತ, ನಿಯಮಗಳ ಉಲ್ಲಂಘನೆ ಕುರಿತಾದ ದೂರುಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಇರುವ ದೂರುಗಳು ಮತ್ತು ಕೈಗೊಂಡ ಕ್ರಮಗಳೇನು ; (ವಿಶ್ವವಿದ್ಯಾಲಯವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)

(ಇ) ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ದೇಶದ ಸಮಗ್ರತೆಗೆ, ಏಕತೆಗೆ ಭಂಗ ತರುವಂತಹ ಮತ್ತು ಶೈಕ್ಷಣಿಕ ವಾತಾವರಣ

ಕಲುಷಿತಗೊಳ್ಳುತ್ತಿರುವಂತ ಪ್ರಕರಣಗಳು ನಡೆದಿರುವುದು ನಿಜವೇ ; ಹಾಗಿದ್ದಲ್ಲಿ, ಅಂತಹ ಪ್ರಕರಣಗಳಲ್ಲಿ ಕೈಗೊಂಡ ಕ್ರಮಗಳೇನು ? (ವಿಶ್ವವಿದ್ಯಾಲಯವಾರು ಪ್ರಕರಣವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)

## ಬೆಂಗಳೂರು ನಗರದ ರಸ್ತೆಗಳಲ್ಲಿ ಅಕ್ರಮ ಜಾಹಿರಾತು ಪ್ರದರ್ಶನ

**ಶ್ರೀ ಎಂ. ಶ್ರೀನಿವಾಸ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೭೫ (೬೨) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ರಸ್ತೆಗಳಲ್ಲಿ ಕಳೆದ ೩ ವರ್ಷಗಳಿಂದ ಜಾಹಿರಾತು ಪ್ರದರ್ಶನದಿಂದ ಸಂಗ್ರಹವಾಗಿರುವ ಹಣವೆಷ್ಟು ; (ವರ್ಷಾವಾರು ಪ್ರದೇಶವಾರು ಮಾಹಿತಿ ಒದಗಿಸುವುದು)

(ಆ) ಅಕ್ರಮ ಜಾಹಿರಾತುಗಳು ಪ್ರದರ್ಶನವಾಗುತ್ತಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ, ಪತ್ತೆ ಹಚ್ಚಲಾದ ಅಂತಹ ಪ್ರಕರಣಗಳ ಸಂಖ್ಯೆ ಎಷ್ಟು ; ಆ ಪ್ರಕರಣಗಳಲ್ಲಿ ಇದುವರೆವಿಗೆ ಕೈಗೊಂಡ ಕ್ರಮಗಳೇನು ; (ಪ್ರತ್ಯೇಕ ಮಾಹಿತಿ ಒದಗಿಸುವುದು)

(ಇ) ಜಾಹಿರಾತು ಪ್ರದರ್ಶನದಿಂದ ಹೆಚ್ಚಿನ ವರಮಾನಗಳಿಸುವ ಸಾಧ್ಯತೆಯಿದ್ದರೂ ಅಧಿಕಾರಿಗಳು ಈ ನಿಟ್ಟಿನಲ್ಲಿ ವಿಫಲವಾಗುತ್ತಿರುವ ಅಂಶವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಯಾವ ಕಾರ್ಯಸೂಚಿಯನ್ನು ಅಳವಡಿಸಿಕೊಳ್ಳಲು ಸರ್ಕಾರವು ಆಲೋಚಿಸಿದೆ? (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)

## ಕುಟುಂಬ ನ್ಯಾಯಾಲಯ ಸ್ಥಾಪನೆ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೬ (೬೫) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನವದೆಹಲಿಯ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಹಾಗೂ ಕಾನೂನು ಮತ್ತು ನ್ಯಾಯ ಇಲಾಖೆಗೆ ಸಂಬಂಧಿಸಿದ ಸಂಸತ್ತಿನ ಸ್ಥಾಯಿ ಸಮಿತಿಯ ಶಿಫಾರಸ್ಸು ಮತ್ತು ಭಾರತದ ಸರ್ವೋಚ್ಛ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು ಪ್ರಧಾನ ಮಂತ್ರಿಗಳಿಗೆ ಬರೆದ ಪತ್ರವನ್ನು ಅನುಸರಿಸಿ ರಾಜ್ಯದ ಪ್ರತಿಯೊಂದು ಜಿಲ್ಲೆಗಳಲ್ಲಿಯೂ ಒಂದು ವರ್ಷದೊಳಗಾಗಿ ಕುಟುಂಬ ನ್ಯಾಯಾಲಯ ಸ್ಥಾಪಿಸಲು ಕ್ರಮ ಕೈಗೊಳ್ಳಬೇಕೆಂದು ತಾ: ೧೬–೦೪–೨೦೦೮ರ ಪತ್ರದಲ್ಲಿ ಕೇಂದ್ರ ಸರ್ಕಾರವು ನಿರ್ದೇಶನ ನೀಡಿರುವ ಮೇರೆಗೆ ಉಡುಪಿ ಜಿಲ್ಲೆ ಸಹಿತ ಕೆಲ ಜಿಲ್ಲೆಗಳಲ್ಲಿ ಕುಟುಂಬ ನ್ಯಾಯಾಲಯ ಸ್ಥಾಪನಗೆ ಮಂಜೂರಾತಿ ಕೋರಿ ಕರ್ನಾಟಕ ಉಚ್ಛ ನ್ಯಾಯಾಲಯವು ತಾ: ೨೮–೦೭–೨೦೦೮ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದಲ್ಲದೆ ಅನೇಕ ನೆನಪೋಲೆಗಳನ್ನು ಕಳುಹಿಸಿದ್ದರೂ ಉಡುಪಿ ಜಿಲ್ಲೆಯಲ್ಲಿ ಈ ತನಕ ಕುಟುಂಬ ನ್ಯಾಯಾಲಯ ಸ್ಥಾಪನೆಗೆ ಸರ್ಕಾರ ಮಂಜೂರಾತಿ ನೀಡದಿರಲು ಕಾರಣವೇನು ; (ವಿವರ ಒದಗಿಸುವುದು)

(ಆ) ಉಡುಪಿ ಜಿಲ್ಲೆಯಲ್ಲಿ ಕುಟುಂಬ ನ್ಯಾಯಾಲಯ ಸ್ಥಾಪಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ ; (ವಿವರ ಒದಗಿಸುವುದು)

(ಇ) ಉಡುಪಿ ಜಿಲ್ಲೆಯಲ್ಲಿ ಕುಟುಂಬ ನ್ಯಾಯಾಲಯ ಸ್ಥಾಪಿಸಲು ಕಾಲಮಿತಿ ನಿಗದಿಪಡಿಸಲಾಗಿದೆಯೇ ; ನಿಗದಿಪಡಿಸಲಾಗಿದ್ದಲ್ಲಿ ಯಾವಾಗ ಸ್ಥಾಪಿಸಲಾಗುವುದು ; (ವಿವರ ಒದಗಿಸುವುದು)

(ಈ) ಉಡುಪಿ ಜಿಲ್ಲೆಯಲ್ಲಿ ತನಿಖೆಗೆ ಬಾಕಿ ಇರುವ ನ್ಯಾಯಾಲಯ ವ್ಯಾಪ್ತಿಗೆ ಬರುವ ಪ್ರಕರಣಗಳು ಎಷ್ಟು ? (ವಿವರ ಒದಗಿಸುವುದು)

## ಆರೋಗ್ಯ ಇಲಾಖೆಯಲ್ಲಿನ ಆಯುಕ್ತರ ವಿರುದ್ಧದ ದೂರುಗಳ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೭ (೬೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆರೋಗ್ಯ ಇಲಾಖೆಯ ಆಯುಕ್ತರು ಹಾಗೂ ಆಹಾರ ಸುರಕ್ಷತಾ ಆಯುಕ್ತರ ವಿರುದ್ಧ ಅವರ ಸೇವಾ ಅವಧಿಯಲ್ಲಿ ಇದುವರೆಗೆ ದಾಖಲಾಗಿರುವ ದೂರುಗಳ ಸಂಖ್ಯೆ ಎಷ್ಟು ; ಅವು ಯಾವುವು ;

(ಆ) ಈ ದೂರುಗಳ ಬಗ್ಗೆ ಸರ್ಕಾರ ಯಾವ ರೀತಿಯ ಕ್ರಮಕೈಗೊಂಡಿದೆ ;

(ಇ) ಪ್ರಸ್ತುತ ಈ ದೂರುಗಳ ಮೇಲಿನ ತನಿಖೆ ಯಾವ ಹಂತದಲ್ಲಿದೆ ? (ಸಂಪೂರ್ಣ ವಿವರ ಒದಗಿಸುವುದು)

## ರಾಜ್ಯ ಸರ್ಕಾರಿ ನೌಕರರ ವೇತನ ತಾರತಮ್ಯದ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೮ (೬೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರಿ ನೌಕರರಿಗೂ ಮತ್ತು ಕೇಂದ್ರ ಸರ್ಕಾರಿ ನೌಕರರಿಗೂ ಹುದ್ದೆಯಲ್ಲಿ ವೇತನ ತಾರತಮ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯ ಸರ್ಕಾರಿ ನೌಕರರಿಗೆ ವೇತನ ತಾರತಮ್ಯದಿಂದ ಆಗುತ್ತಿರುವ ಅನ್ಯಾಯ ಸರಿಪಡಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಇ) ರಾಜ್ಯ ಸರ್ಕಾರಿ ನೌಕರರ ಬೇಡಿಕೆಯಾದ ೭ನೇ ವೇತನ ಆಯೋಗ ರಚನೆ ಮತ್ತು ಇನ್ನಿತರ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಸರ್ಕಾರದ ನಿಲುವೇನು ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ?

## ನೂತನ ಪಿಂಚಣಿ ಯೋಜನೆ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೯ (೬೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನೂತನ ಪಿಂಚಣಿ ಯೋಜನೆ (ಎನ್.ಪಿ.ಎಸ್.)ಗೆ ಒಳಪಡುವ ರಾಜ್ಯ ಸರ್ಕಾರಿ ನೌಕರರ ಸಂಖ್ಯೆ ಎಷ್ಟು ; (ಇಲಾಖಾವಾರು ಜಿಲ್ಲಾವಾರು ವಿವರ ನೀಡುವುದು)

(ಆ) ಎನ್.ಪಿ.ಎಸ್. ಯೋಜನೆ ಜಾರಿಯಾದ ನಂತರ ಮೃತಪಟ್ಟ ಮತ್ತು ಶಾಶ್ವತ ವಿಕಲಚೇತನರಾದ ನೂತನ ಪಿಂಚಣಿ ಯೋಜನೆ (ಎನ್.ಪಿ.ಎಸ್.) ಗೆ ಒಳಪಡುವ ರಾಜ್ಯ ಸರ್ಕಾರಿ ನೌಕರರ ಸಂಖ್ಯೆ ಎಷ್ಟು ; (ವರ್ಷವಾರ ವಿವರ ಒದಗಿಸುವುದು)

(ಇ) ಮೃತಪಟ್ಟ ಮತ್ತು ಶಾಶ್ವತ ವಿಕಲಚೇತನರಾದ ನೂತನ ಪಿಂಚಣಿ ಯೋಜನೆ (ಎನ್.ಪಿ.ಎಸ್.)ಗೆ ಒಳಪಡುವ ರಾಜ್ಯ ಸರ್ಕಾರಿ ನೌಕರರಿಗೆ ಇದುವರೆಗೆ ಯಾವ ರೀತಿಯ ಮರಣ ಉಪದಾನ ಮತ್ತು ಪಿಂಚಣಿಗಳನ್ನು ವಿತರಿಸಲಾಗಿದೆ ; (ಪರಿಹಾರ ಒದಗಿಸಿದ ಮತ್ತು ಬಾಕಿಯಿರುವ ಪ್ರಕರಣಗಳ ಸಂಖ್ಯೆ ಎಷ್ಟು)

(ಈ) ನೂತನ ಪಿಂಚಣಿ ಯೋಜನೆ (ಎನ್.ಪಿ.ಎಸ್) ಗೆ ಒಳಪಡುವ ರಾಜ್ಯ ಸರ್ಕಾರಿ ನೌಕರರು ಮೃತಪಟ್ಟಾಗ ಶಾಶ್ವತ ವಿಕಲಚೇತನರಾದಾಗ ಹಾಗೂ ನಿವೃತ್ತರಾದ ನಂತರದ ಪಿಂಚಣಿಗೆ ಭದ್ರತೆ ಒದಗಿಸುವ ಸಂಬಂಧ ಸರ್ಕಾರದ ಯಾವ ಕ್ರಮ ಕೈಗೊಳ್ಳಲಿದೆ ; ಈ ಸಂಬಂಧ ಸರ್ಕಾರಿ ನೌಕರರ ಗೊಂದಲ ನಿವಾರಿಸುವ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು ?

## ಸರಗಳ್ಳರ ಹಾವಳಿ ಕುರಿತು

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು):–**

೧೮೦ (೬೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರಗಳ್ಳರ ವಿರುದ್ಧ ಕಳೆದ ೧ ವರ್ಷದಿಂದ ದಾಖಲಾಗಿರುವ ದೂರುಗಳು ಎಷ್ಟು ; (ಜಿಲ್ಲಾವಾರು ವಿವರ ನೀಡುವುದು) ಆ ಪೈಕಿ ಪತ್ತೆ ಹಚ್ಚಲಾದ ಪ್ರಕರಣಗಳು ಎಷ್ಟು ; ಬಾಕಿ ಇರುವ ಪ್ರಕರಣಗಳನ್ನು ಶೀಘ್ರದಲ್ಲಿ ಪತ್ತೆ ಹಚ್ಚಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಆ) ಸರಗಳ್ಳರ ಹಾವಳಿ ಇತ್ತೀಚೆಗೆ ಜಾಸ್ತಿಯಾಗಿದ್ದು ನಿಯಂತ್ರಿಸುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಕಳ್ಳರಿಂದ ವಶಪಡಿಸಿಕೊಂಡಿರುವ ಆಭರಣಗಳ ಮೌಲ್ಯ ಎಷ್ಟು ; ಅವುಗಳನ್ನು ಸಂಬಂಧಪಟ್ಟವರಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗಿದೆಯೇ ? (ವಿವರ ನೀಡುವುದು)

## ಮಹಿಳಾ ಪೊಲೀಸ್ ಠಾಣೆಗಳ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು):–**

೧೮೧ (೬೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹೆಚ್ಚುವರಿಯಾಗಿ ಎಷ್ಟು ಮಹಿಳಾ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲು ಮತ್ತು ಎಷ್ಟು ಮಹಿಳಾ ಪೊಲೀಸ್ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ಬೇಡಿಕೆಯಿದೆ ;

(ಆ) ಅತ್ಯಾಚಾರ, ಮಹಿಳೆಯರ ಮೇಲಿನ ದೌರ್ಜನ್ಯ ಇತ್ಯಾದಿ ಮಹಿಳಾ ಪ್ರಕರಣಗಳನ್ನು ತುರ್ತಾಗಿ ನಿರ್ವಹಿಸಲು ಅಗತ್ಯವಿರುವ ಮಹಿಳಾ ಪೊಲೀಸ್ ಠಾಣೆಗಳನ್ನು ತೆರೆಯಲು ಮತ್ತು ಮಹಿಳಾ ಪೊಲೀಸ್ ಸಿಬ್ಬಂದಿಗಳನ್ನು ನೇಮಕ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳಲಾಗುವುದು ?

## ಕೇಂದ್ರದಿಂದ ರಾಜ್ಯದ ಅಭಿವೃದ್ಧಿಗೆ ದೊರಕದ ಅನುದಾನ ಮತ್ತು ಬಳಕೆ ವಿವರ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೮೨ (೧೮೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಅಭಿವೃದ್ಧಿಯ ಉದ್ದೇಶದಿಂದ ಹೊಸ ಸರ್ಕಾರ ಆಡಳಿತಕ್ಕೆ ಬಂದಾಗಿನಿಂದ ರಾಜ್ಯಕ್ಕೆ ಕೇಂದ್ರದಿಂದ ಅನುದಾನ ಮಂಜೂರಾಗಿದೆಯೇ ಹಾಗಾದರೆ ದೊರಕಿದ ಒಟ್ಟು ಅನುದಾನವೇಷ್ಟು ; (ಇಲಾಖಾವಾರು ವಿವರ ನೀಡುವುದು)

(ಆ) ಕೇಂದ್ರದಿಂದ ದೊರಕಿದ ಅನುದಾನವನ್ನು ಸಮರ್ಪಕವಾಗಿ ಬಳಸಲಾಗಿದೆಯೇ ; (ಇಲಾಖಾವಾರು ಹಾಗೂ ಜಿಲ್ಲಾವಾರು ವಿವರ ಒದಗಿಸುವುದು) ಬಳಕೆಯಾಗದೇ ಉಳಿದಿರುವ ಅನುದಾನ ಎಷ್ಟು ; (ವಿವರ ನೀಡುವುದು)

(ಇ) ಪ್ರತಿ ಇಲಾಖೆಯ ಅನುದಾನ ಬಳಕೆಯ ವಾರ್ಷಿಕ ವಿವರ ನೀಡುವುದು ;

(ಈ) ಸದರಿ ಹೊಸ ಯೋಜನೆಗಳನ್ನು ರೂಪಿಸುವ ಸಲುವಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ ; ಸಲ್ಲಿಸಿದ್ದಲ್ಲಿ ಯೋಜನೆಗಳ ಮತ್ತು ಕೋರಿರುವ ಅನುದಾನದ ವಿವರ ನೀಡುವುದು ?

## ಕನ್ನಡ ಮತ್ತು ರೈತಪರ ಹೋರಾಟಗಾರರ ಮೇಲಿರುವ ಮೊಕದ್ದಮೆಗಳನ್ನು ಕೈ ಬಿಡುವ ಬಗ್ಗೆ

**ಶ್ರೀ ಅಶ್ವಥ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೮೩ (೩೨೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ನಗರ ಕನ್ನಡ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷರ ಮೇಲೆ ಗೂಂಡಾ ಕಾಯಿದೆ ಅಡಿಯಲ್ಲಿ ಮೊಕ್ಕದ್ದಮೆ ಹೂಡಿ ಕನ್ನಡಪರ ಹೋರಾಟಗಾರರ ಧೈರ್ಯ ಕುಂದಿಸುವ ಹುನ್ನಾರ ಇಲಾಖೆಯಲ್ಲಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸದರಿ ಕನ್ನಡ ಪರ ಹೋರಾಟಗಾರರ ಮೇಲೆ ಮತ್ತು ರಾಜ್ಯಾಧ್ಯಕ್ಷರ, ಕನ್ನಡ ಪರ ಹಾಗೂ ರೈತಪರ ಹೋರಾಟಗಾರರ ಮೇಲೆ ಹಾಕಿರುವ ಮೊಕ್ಕದ್ದಮೆಗಳನ್ನು ಸರ್ಕಾರ ಕೈ ಬಿಡಬಹುದಲ್ಲವೇ ?

## ರಾಜ್ಯ ಸರ್ಕಾರದ ಸಾಲದ ಬಗ್ಗೆ

**ಶ್ರೀ ಅಶ್ವಥ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೮೪ (೩೨೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಸ್ತುತ ರಾಜ್ಯ ಸರ್ಕಾರದ ಮೇಲಿರುವ ಒಟ್ಟು ಸಾಲ ಎಷ್ಟು; ಕಳೆದ ಐದು ವರ್ಷಗಳಿಂದ ಯಾವ ಯಾವ ಮೂಲಗಳಿಂದ ಎಷ್ಟೆಷ್ಟು ಸಾಲವನ್ನು ಪಡೆಯಲಾಗಿದೆ ;

(ಆ) ವಿದೇಶಿ ಸಂಸ್ಥೆಗಳ ನೆರವಿನಿಂದ ಐದು ವರ್ಷಗಳಿಂದ ಪಡೆದಿರುವ ಸಾಲವೆಷ್ಟು ; (ವರ್ಷವಾರು ವಿವರ ನೀಡುವುದು)

(ಇ) ಎಲ್ಲಾ ಮೂಲಗಳ ಸಾಲಗಳಿಗೆ ಪ್ರತಿ ತಿಂಗಳು ಪಾವತಿಸುತ್ತಿರುವ ಬಡ್ಡಿಯದರ ದರ ಎಷ್ಟು ? (ವಿವರ ನೀಡುವುದು)

## ೧೪ನೇ ಹಣಕಾಸು ಯೋಜನೆಯಡಿ ನಗರಾಭಿವೃದ್ಧಿ ಇಲಾಖೆಗೆ ಬಿಡುಗಡೆ ಮಾಡಿರುವ ಅನುದಾನ

**ಶ್ರೀ ಅಶ್ವಥ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೮೫ (೧೮೮) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೇಂದ್ರ ಸರ್ಕಾರದ ೧೪ನೇ ಹಣಕಾಸು ಯೋಜನೆಯಡಿ ರಾಜ್ಯದ ನಗರಾಭಿವೃದ್ಧಿ ಇಲಾಖೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು ; ಯಾವ ಯಾವ ಯೋಜನೆಗಳಿಗೆ ಅನುದಾನ ಬಿಡುಗಡೆಯಾಗಿದೆ ;

(ಆ) ರಾಜ್ಯ ನಗರಾಭಿವೃದ್ಧಿ ಇಲಾಖೆಯಿಂದ ಕೇಂದ್ರ ಸರ್ಕಾರಕ್ಕೆ ಹಣ ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ ; ಸಲ್ಲಿಸಿದ್ದರೆ, ಯಾವ ಯಾವ ಯೋಜನೆಗಳಿಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ ; ಪ್ರಸ್ತಾವನೆಯಲ್ಲಿ ಕೇಳಿರುವ ಹಣವೆಷ್ಟು ; (ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ ಹೊರತುಪಡಿಸಿ)

(ಇ) ೨೦೧೪–೧೫ ಮತ್ತು ೨೦೧೫–೧೬ನೇ ಸಾಲಿನಲ್ಲಿ ಕೇಂದ್ರದಿಂದ ರಾಜ್ಯದ ನಗರಾಭಿವೃದ್ಧಿ ಇಲಾಖೆಗೆ ಬಿಡುಗಡೆ ಮಾಡಿರುವ ಹಣವೆಷ್ಟು ;

(ಈ) ಕೇಂದ್ರ ಸರ್ಕಾರದ ಅಮೃತಮಿಷನ್ ಯೋಜನೆಯಡಿ ಯಾವ ಯಾವ ನಗರಗಳಿಗೆ ಎಷ್ಟೆಷ್ಟು ಹಣವನ್ನು ಬಿಡುಗಡೆಗೊಳಿಸಲಾಗಿದೆ ? (ವಿವರ ನೀಡುವುದು)

## ೧೪ನೇ ಹಣಕಾಸು ಆಯೋಗದಿಂದ ಬೆಂಗಳೂರು ಮಹಾನಗರ ಪಾಲಿಕೆಗೆ ಬಿಡುಗಡೆಗೊಂಡ ಹಣದ ಬಗ್ಗೆ

**ಶ್ರೀ ಅಶ್ವಥ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೮೬ (೩೨೧) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೇಂದ್ರ ಸರ್ಕಾರದ ೧೪ನೇ ಹಣಕಾಸು ಆಯೋಗದಿಂದ ಬೆಂಗಳೂರು ಮಹಾನಗರ ಪಾಲಿಕೆಗೆ ಬಿಡುಗಡೆಯಾಗಿರುವ ಹಣವೆಷ್ಟು ; ಬಂದಿರುವ ಹಣದಲ್ಲಿ ರೂಪಿಸಿರುವ ಯೋಜನೆಗಳು ಯಾವುವು ; ರೂಪಿಸಿದ್ದರೆ, ಯಾವ ಆಧಾರದಲ್ಲಿ ಯೋಜನೆ ರೂಪಿಸಲಾಗಿದೆ ; ಯೋಜನೆ ರೂಪಿಸುವಾಗ ಕೌನ್ಸಿಲ್ ಸಭೆ ಒಪ್ಪಿಗೆ ಪಡೆಯಲಾಗಿದೆಯೇ ;

(ಆ) ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಲೋಕಾಯುಕ್ತ, ಸಿಓಡಿ, ಸಿಬಿಐ ಮತ್ತು ಇತರೆ ತನಿಖೆಗಳಿಗೆ ವಹಿಸಿರುವ ಅವ್ಯವಹಾರದ ಪ್ರಕರಣಗಳೆಷ್ಟು; ಯಾವಾಗ ವಹಿಸಲಾಯಿತು ; ತನಿಖೆ ಪೂರ್ಣಗೊಂಡಿರುವ ಪ್ರಕರಣಗಳಾವುವು ; ತನಿಖೆಯಾಧಾರದ ಮೇಲೆ ತಪ್ಪಿತಸ್ಥರ ಮೇಲೆ ತೆಗೆದುಕೊಂಡಿರುವ ಕ್ರಮವೇನು ?

## ಮಾಜಿ ಸೈನಿಕರಿಗೆ ನೀಡುವ ಸೇವಾ ಸೌಲಭ್ಯಗಳನ್ನು ನೀಡುವಲ್ಲಿ ಆಗುತ್ತಿರುವ ವಿಳಂಬ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–**

೧೮೭ (೧೮೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಾಜಿ ಸೈನಿಕರು ಸರ್ಕಾರಿ ಸೇವೆಯಲ್ಲಿ ಸೇರಿಕೊಂಡಾಗ ಅವರಿಗೆ ನ್ಯಾಯ ಸಮ್ಮತವಾಗಿ ಸಿಗಬೇಕಾದ ಸೌಲಭ್ಯಗಳು ಪೂರ್ಣ ಪ್ರಮಾಣದಲ್ಲಿ ದೊರಕದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮಾಜಿ ಸೈನಿಕರಿಗೆ ನೀಡುವ ಸೇವಾ ಸೌಲಭ್ಯಗಳ ಕುರಿತಾಗಿ ಕೇಂದ್ರ ಸರ್ಕಾರದ ನಿರ್ದೇಶನವಿದ್ದರೂ ಅವುಗಳನ್ನು ಅನುಸರಿಸದೇ ಇರಲು ಕಾರಣಗಳೇನು ;

(ಇ) ರಾಜ್ಯದ ವಿವಿಧ ಜಿಲ್ಲೆಗಳ ಮಾಜಿ ಸೈನಿಕರಿಗೆ ನೀಡುವ ಜಮೀನಿನ ಕುರಿತಾಗಿ ಸಾವಿರಾರು ಅರ್ಜಿಗಳು ಬಾಕಿಯಿದ್ದು ಈ ಕುರಿತಾಗಿ ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಮಾಜಿ ಸೈನಿಕರಿಗೆ ಮೀಸಲಾಗಿರುವ ಹುದ್ದೆಗಳನ್ನು ತುಂಬಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

## ಬೆಂಗಳೂರು ನಗರದ ಅಭಿವೃದ್ಧಿ ಕಾರ್ಯಗಳ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–**

೧೮೮ (೧೯೦) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರದ ಅಭಿವೃದ್ಧಿ ಕಾರ್ಯಗಳಲ್ಲಿ ಸರ್ಕಾರಿ ಸ್ವಾಮ್ಯದ ಹಲವಾರು ಸಂಸ್ಥೆಗಳು (B.B.M.P/B.W.S.S.B/ BESCOM/B.S.N.L.) ಒಳಗೊಂಡಿದ್ದು, ಈ ಸಂಸ್ಥೆಗಳ ನಡುವೆ ಸಹಕಾರ ಮತ್ತು ಸಂಪರ್ಕದ ಕೊರತೆಯಿಂದ ಕೆಲಸ ಕಾರ್ಯ ಅರ್ಧದಲ್ಲೇ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) B.W.S.S.B ವತಿಯಿಂದ ಒಳಚರಂಡಿ ಕಾಮಗಾರಿಯನ್ನು ಮುಗಿಸಿದ ನಂತರ ತೆಗೆದುಹಾಕುವ ಮಣ್ಣನ್ನು ರಸ್ತೆಯಲ್ಲಿಯೇ ಹಾಗೇ ಬಿಟ್ಟು ಹೋಗುವುದರಿಂದ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದ್ದು ಇದನ್ನು ಸ್ವಚ್ಛಗೊಳಿಸುವ ಕಾರ್ಯ ಯಾರ ವ್ಯಾಪ್ತಿಗೆ ಬರುತ್ತದೆ ಎಂಬ ಗೊಂದಲವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಇಲಾಖೆಗಳ ನಡುವೆ ಹೊಂದಾಣಿಕೆ ತರಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ರಾಜ್ಯ ಗೃಹ ರಕ್ಷಕ ದಳದ ಸಿಬ್ಬಂದಿಗಳ ವೇತನ ಪರಿಷ್ಕರಣೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–**

೧೮೯ (೧೯೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಗೃಹ ರಕ್ಷಕ ದಳದ ಸಿಬ್ಬಂದಿಗಳಿಗೆ ನೀಡಲಾಗುತ್ತಿರುವ ಗೌರವಧನವೆಷ್ಟು ; (ವಿವರ ನೀಡುವುದು)

(ಆ) ಈ ಹಿಂದೆ ಸಿಬ್ಬಂದಿಗಳ ಗೌರವಧನವನ್ನು ಯಾವಾಗ ಪರಿಷ್ಕರಿಸಲಾಗಿತ್ತು ;

(ಇ) ಅತ್ಯಂತ ಸೂಕ್ಷ್ಮ ಪ್ರದೇಶಗಳಲ್ಲಿ ಅನಿವಾರ್ಯ ಹಾಗೂ ಕಠಿಣ ಸಂದರ್ಭಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗೃಹ ರಕ್ಷಕ ಸಿಬ್ಬಂದಿಗಳ ವೇತನ ಪರಿಷ್ಕರಣೆಯನ್ನು ಯಾವಾಗ ಪರಿಷ್ಕರಿಸಲಾಗುವುದು ?

## ರಾಜ್ಯದಲ್ಲಿ ಕಣ್ಮರೆಯಾಗಿರುವ ಹೆಣ್ಣು ಮಕ್ಕಳ ಪ್ರಕರಣಗಳ ಕುರಿತು

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–**

೧೯೦ (೧೯೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೩ ವರ್ಷಗಳಲ್ಲಿ ರಾಜ್ಯದಿಂದ ಕಣ್ಮರೆಯಾಗಿರುವ ಮಹಿಳೆಯರು ಮತ್ತು ಹೆಣ್ಣುಮಕ್ಕಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಇವುಗಳಲ್ಲಿ ಪತ್ತೆಯಾದವರ ಸಂಖ್ಯೆ ಎಷ್ಟು ; ಪತ್ತೆ ಆಗಿರದ ಪ್ರಕರಣಗಳ ಕುರಿತು ಯಾವ ಕ್ರಮಕೈಗೊಳ್ಳಲಾಗಿದೆ ;

(ಇ) ಮಹಿಳೆಯರು ಮತ್ತು ಹೆಣ್ಣುಮಕ್ಕಳ ಅಪಹರಣಕಾರರ ಜಾಲವನ್ನು ಪತ್ತೆ ಹಚ್ಚಲಾಗಿದೆಯೇ ; ಆಗಿದ್ದಲ್ಲಿ, ಅವರ ಮೇಲೆ ಕೈಗೊಂಡಿರುವ ಕ್ರಮಗಳೇನು ?

## ಸರ್ಕಾರಿ ಪದವಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಿಗೆ ನೀಡುತ್ತಿರುವ ಸೌಲಭ್ಯ ಹಾಗೂ ಬೇಡಿಕೆಗಳ ಕುರಿತು

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–**

೧೯೧ (೧೯೩) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ನೇಮಕ ಗೊಂಡಿರುವ ಅತಿಥಿ ಉಪನ್ಯಾಸಕರ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಇ) ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರುಗಳ ನೇಮಕಾತಿಗೆ ಇರುವ ಮಾನದಂಡಗಳೇನು ; (ವಿವರ ನೀಡುವುದು)

(ಈ) ರಾಜ್ಯದ ಅತಿಥಿ ಉಪನ್ಯಾಸಕರಿಗೆ ನೀಡುತ್ತಿರುವ ಸೌಲಭ್ಯಗಳೇನು; (ವಿವರ ನೀಡುವುದು)

(ಉ) ಅತಿಥಿ ಉಪನ್ಯಾಸಕರಿಗೆ ನೀಡುತ್ತಿರುವ ಗೌರವಧನವನ್ನು ಯು.ಜಿ.ಸಿ. ಮಾನದಂಡದಂತೆ ಹೆಚ್ಚಿಸುವುದು, ಯು.ಜಿ.ಸಿ. ಅರ್ಹತೆ ಇರುವ

ಅತಿಥಿ ಉಪನ್ಯಾಸಕರ ಸೇವಾ ಸಕ್ರಮಾತಿಗೆ ಕ್ರಮ, ಹಿಂದಿನ ವರ್ಷಗಳಲ್ಲಿ ಸೇವೆ ಸಲ್ಲಿಸಿರುವ ಅರ್ಹ ಅತಿಥಿ ಉಪನ್ಯಾಸಕರ ಮುಂದುವರಿಕೆ ಹಾಗೂ ಇನ್ನಿತರ ಬೇಡಿಕೆಗಳ ಕುರಿತು ಸರ್ಕಾರದ ನಿಲುವೇನು ?

## ಬೆಂಗಳೂರು ರೈಲ್ವೆ ಬಡಾವಣೆಯ ಭವಾನಿ ನಗರದಲ್ಲಿ ಒಳ ಚರಂಡಿಯ ಅವ್ಯವಸ್ಥೆ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–**

೧೯೨ (೧೯೫) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ರೈಲ್ವೆ ಬಡಾವಣೆಯ ಭವಾನಿನಗರ ೨ನೇ ಹಂತದಲ್ಲಿನ, ೪ನೇ ಅಡ್ಡ ರಸ್ತೆಯ ಬಳಿಯಲ್ಲಿನ ಒಳ ಚರಂಡಿಯ ಕೊಳವೆಯು ಒಡೆದು ಕೊಳಚೆ ನೀರು ರಸ್ತೆಗೆ ಹರಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ಒಳ ಚರಂಡಿಯ ಕೊಳವೆಯು ಮುಖ್ಯ ಕೊಳವೆಯ ಮಾರ್ಗಕ್ಕೆ ಜೋಡಣೆಯಾಗಿಲ್ಲದಿರುವ ವಿಚಾರ ತಿಳಿದಿದೆಯೇ ;

(ಇ) ಸದರಿ ದುರಸ್ಥಿ ಕಾಮಗಾರಿಗೆ ಈಗಾಗಲೇ ಪ್ರಕ್ರಿಯೆಗಳು ಮುಗಿದಿದ್ದರೂ ಕಾಮಗಾರಿ ಅನುಷ್ಠಾನಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಅಲ್ಲಿನ ಸುತ್ತ ಮುತ್ತಲಿನ ನಿವಾಸಿಗಳು ಚರಂಡಿಯ ದುರ್ನಾತದಿಂದ ಅನಾರೋಗ್ಯ ಪೀಡಿತರಾಗುತ್ತಿದ್ದು, ಇದರ ಪರಿಹಾರಕ್ಕೆ ಬೇಕಾಗುವ ಕಾಲಾವಧಿ ಏನು ?

## ವಿಶ್ವ ವಿದ್ಯಾಲಯದಲ್ಲಿನ ಸಮೂಹ ಸಂವಹನ ಸಂಶೋಧನಾ ವಿಭಾಗದ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–**

೧೯೩ (೧೯೬) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ವಿಶ್ವ ವಿದ್ಯಾಲಯದಲ್ಲಿ ಸಮೂಹ ಸಂವಹನ ಸಂಶೋಧನಾ ವಿಭಾಗವನ್ನು ವಿಜ್ಞಾನ ನಿಖಾಯದಲ್ಲಿ ಸೇರಿಸಿರುವುದು ನಿಜವೇ ;

(ಆ) ದೇಶದ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಸದರಿ ವಿಭಾಗವನ್ನು ಕಲಾ ನಿಖಾಯದಲ್ಲಿ ಸೇರಿಸಿರುವುದು ನಿಜವೇ ; ನಿಜವಾಗಿದ್ದಲ್ಲಿ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸದರಿ ವಿಭಾಗವನ್ನು ವಿಜ್ಞಾನ ನಿಖಾಯದಲ್ಲಿ ಸೇರಿಸಿರಲು ಕಾರಣವೇನು ;

(ಇ) ಇದನ್ನು ಪ್ರಶ್ನಿಸಿ ಕಲಾ ನಿಖಾಯಕ್ಕೆ ವರ್ಗಾಯಿಸುವಂತೆ ಯು.ಜಿ.ಸಿ. ಯಿಂದ ಆದೇಶವಾಗಿರುವುದು ನಿಜವೇ ;

(ಈ) ಈ ಸಂಬಂಧ ಯಾವ ರೀತಿಯ ಕ್ರಮ ಕೈಗೊಳ್ಳಲಾಗುವುದು ?

## ಜಲ ಮಂಡಲಿ ಪೂರೈಸುತ್ತಿದ್ದ ನೀರಿನ ಸೋರಿಕೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–**

೧೯೪ (೧೯೭) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಈ ಹಿಂದೆ ಬೆಂಗಳೂರು ಜಲಮಂಡಲಿ ಪೂರೈಸುತ್ತಿದ್ದ ನೀರಿನಲ್ಲಿ ಸೋರಿಕೆಯಾಗುತ್ತಿದುದ್ದು ನಿಜವೇ ; ಸೋರಿಕೆಯಾದ ನೀರಿನ ಪ್ರಮಾಣ ಎಷ್ಟು ; ಎಷ್ಟು ಪ್ರಮಾಣದ ಹಣ ನಷ್ಟವಾಗುತ್ತಿತ್ತು ;

(ಆ) ಕಳೆದ ೨ ವರ್ಷಗಳಿಂದ ಸೋರಿಕೆ ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು ; ಇದಕ್ಕೆ ತಗಲಿರುವ ವೆಚ್ಚವೆಷ್ಟು ;

(ಇ) ನೀಡಿದ್ದ ಗಡುವಿನೊಳಗೆ ಕ್ರಮ ಕೈಗೊಂಡು ಹಾಕಿಕೊಂಡಿದ್ದ ಗುರಿ ತಲುಪಲು ವಿಫಲವಾಗಿರುವುದು ನಿಜವೇ ;

(ಈ) ನಿಜವಾಗಿದ್ದಲ್ಲಿ ಗುರಿ ತಲುಪಲು ವಿಫಲವಾಗಿದ್ದಕ್ಕೆ ಕಾರಣವೇನು? (ವಿವರ ನೀಡುವುದು)

## ಕಾಲೇಜು ಶಿಕ್ಷಣ ಇಲಾಖೆಯಲ್ಲಿನ ಅತಿಥಿ ಉಪನ್ಯಾಸಕರ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–**

೧೯೫ (೧೯೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾಲೇಜು ಶಿಕ್ಷಣ ಇಲಾಖೆಯಡಿಯಲ್ಲಿ ರಾಜ್ಯದಲ್ಲಿರುವ ಅತಿಥಿ ಉಪನ್ಯಾಸಕರ ಸಂಖ್ಯೆ ಎಷ್ಟು ;

(ಆ) ಇವರುಗಳು ಎಷ್ಟು ಕಾಲದಿಂದ ಅತಿಥಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ;

(ಇ) ಇವರುಗಳನ್ನು ಸೇವೆಯಿಂದ ವಜಾಗೊಳಿಸುವಂತೆ ಆದೇಶಿಸುತ್ತಿರುವುದು ನಿಜವೇ ;

(ಈ) ನಿಜವಾಗಿದ್ದಲ್ಲಿ ಕಾರಣವೇನು ; ಇದು ಅವಮಾನವೀಯ ಕ್ರಮವಲ್ಲವೇ?

# ಮೈಸೂರು ನಗರದಲ್ಲಿ ಪಾರ್ಕಿಂಗ್ ಅವ್ಯವಸ್ಥೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೬ (೨೦೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ನಗರದಲ್ಲಿ ಮೃಗಾಲಯದ ಮುಂಭಾಗ ಮತ್ತು ಮೈಸೂರು ಮಾಲ್ ಬಳಿ ವಾಹನ ನಿಲುಗಡೆ ಅವ್ಯವಸ್ಥೆಯಿಂದ ಕೂಡಿದ್ದು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮೃಗಾಲಯದ ಮುಂದೆಯೇ ಎಲ್ಲೆಂದರಲ್ಲಿ ವಾಹನ ನಿಲ್ಲಿಸಲು ಅವಕಾಶ ಮಾಡಿಕೊಡುತ್ತಿರುವುದು, ಮೃಗಾಲಯಕ್ಕೆ ನಿಗಧಿಪಡಿಸಿರುವ ದೊಡ್ಡಕರೆ ಮೈದಾನದ ಪಾರ್ಕಿಂಗ್ ಪ್ರದೇಶಕ್ಕೆ ವಾಹನಗಳನ್ನು ಕಳುಹಿಸದೇ ಇರುವುದು, ಈ ಪಾರ್ಕಿಂಗ್ ಪ್ರದೇಶದಲ್ಲಿ ವಾಹನ ನಿಲುಗಡೆಗೆ ಸೂಕ್ತ ಸೌಲಭ್ಯ ಕಲ್ಪಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಮೈಸೂರು ಮಾಲ್ ಬಳಿ ವಾಹನ ನಿಲುಗಡೆಗೆ ಶುಲ್ಕ ನೀಡುವುದನ್ನು ತಪ್ಪಿಸಿಕೊಳ್ಳಲು ಸಾರ್ವಜನಿಕರು ಎಲ್ಲೆಂದರಲ್ಲಿ, ಮನೆಮನೆಗಳ ಮುಂದೆ, ರಸ್ತೆಯಲ್ಲಿ ಅಡ್ಡಾದಿಡ್ಡಿ ವಾಹನ ನಿಲುಗಡೆ ಮಾಡಿ ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದನ್ನು ತಪ್ಪಿಸಲು ಕ್ರಮ ಕೈಗೊಳ್ಳಲಾಗುವುದೇ?

# ಮೈಸೂರು ನಗರದಲ್ಲಿ ಪೊಲೀಸ್ ಬಲದ ಕೊರತೆ ಮತ್ತು ಅಪರಾಧಗಳ ಹೆಚ್ಚಳ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೭ (೧೯೯) ಮಾನ್ಯ ಗೃಹ  ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ನಗರದ ಪೊಲೀಸ್ ಕಮೀಷನರೇಟ್‌ಗೆ ಮಂಜೂರಾಗಿರುವ ವಿವಿಧ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ಬಲ ಎಷ್ಟು ; ಹಾಲಿ ಸೇವೆ ಸಲ್ಲಿಸುತ್ತಿರುವ ಮತ್ತು ಖಾಲಿ ಇರುವ ಪೊಲೀಸ್ ಅಧಿಕಾರಿ ಮತ್ತ ಸಿಬ್ಬಂದಿ ಬಲ ಎಷ್ಟು ; (ವಿವರ ಒದಗಿಸುವುದು)

(ಆ) ಕಳೆದ ವರ್ಷದಲ್ಲಿ ಮೈಸೂರು ನಗರದಲ್ಲಿ ನಡೆದಿರುವ ವಿವಿಧ ಬಗೆಯ ಅಪರಾಧಗಳ ಸಂಖ್ಯೆ ಎಷ್ಟು ; ಪತ್ತೆಯಾಗಿರುವ ಮತ್ತು ಇನ್ನೂ ಪತ್ತೆಯಾಗದ ಅಪರಾಧಗಳ ಸಂಖ್ಯೆ ಎಷ್ಟು ; ಅಪರಾಧ ಪ್ರಮಾಣದಲ್ಲಿ ಹೆಚ್ಚಳ ಹಾಗೂ ಸಿಬ್ಬಂದಿ ಕೊರತೆಯಿಂದ ಅಪರಾಧ ತನಿಖೆಯಲ್ಲಿ ವಿಳಂಬ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಮೈಸೂರು ನಗರದಲ್ಲಿ ಎಲ್ಲೆಲ್ಲಿ ಹೊಸ ಪೊಲೀಸ್ ಠಾಣೆಗಳನ್ನು (ಸಂಚಾರಿ ಪೊಲೀಸ್ ಠಾಣೆ) ಸೇರಿದಂತೆ ಪ್ರಾರಂಭಿಸಲಾಗಿದೆ ; ಹೊಸದಾಗಿ ಎಲ್ಲೆಲ್ಲಿ ಪೊಲೀಸ್ ಠಾಣೆಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ ?

## ಚಾಮುಂಡಿ ಬೆಟ್ಟದ ಮೇಲೆ ಅಭಿವೃದ್ಧಿ ಕಾರ್ಯಗಳ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೯೮ (೨೭೯) ಮಾನ್ಯ ಅಬಕಾರಿ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಾಮುಂಡಿ ಬೆಟ್ಟದ ಮೇಲೆ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ ; ಯೋಜನೆಯ ರೂಪುರೇಷೆಗಳೇನು ; ಅದರ ಅಂದಾಜು ವೆಚ್ಚ ಎಷ್ಟು ; (ವಿವರಗಳನ್ನು ಒದಗಿಸುವುದು)

(ಆ) ಚಾಮುಂಡಿ ಬೆಟ್ಟದ ಮೇಲೆ ಸ್ಥಳಾವಕಾಶ ಕಡಿಮೆ ಇದ್ದು, ಪರಿಸರ, ಅರಣ್ಯ ಹಾಗೂ ಪಾವಿತ್ರ್ಯತೆಯನ್ನು ಕಾಪಾಡುವ ದೃಷ್ಟಿಯಿಂದ ಈ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಬಿಡಲಾಗುವುದೇ ?

## ಬೆಂಗಳೂರು ನಗರದ ಪಾದಾಚಾರಿಮಾರ್ಗ ನಿರ್ವಹಣೆ

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೯೯ (೨೦೨) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷದಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಸ್ತೆ ಬದಿಯ ಫುಟ್‌ಪಾತ್‌ಗಳ ಕಾಮಗಾರಿ ನಿರ್ವಹಿಸಲು ವಿನಿಯೋಗಿಸಿರುವ ಅನುದಾನವೆಷ್ಟು ; (ವರ್ಷವಾರು, ವಾರ್ಡ್‌ವಾರು ಮಾಹಿತಿ ನೀಡುವುದು)

(ಆ) ಫುಟ್‌ಪಾತ್‌ಗಳ ಕಾಮಗಾರಿಗಳು ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ; ಬಂದಿದ್ದಲ್ಲಿ, ಇದರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲಿ ಎಲ್ಲಿಂದ ಎಲ್ಲಿಯವರೆಗೆ ರಸ್ತೆ ಬದಿಗೆ ಪುಟ್‌ಪಾತ್ ಸೌಲಭ್ಯವನ್ನು ಕಲ್ಪಿಸಲಾಗಿದೆ ; (ವಾರ್ಡ್‌ವಾರು ಅನುದಾನದ ವಿವರ ನೀಡುವುದು)

(ಈ) ಪುಟ್‌ಪಾತ್ ಕಾಮಗಾರಿಯು ತೀರಾ ಅವೈಜ್ಞಾನಿಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಮುಂದಿನ ದಿನಗಳಲ್ಲಿ ಸರಿಪಡಿಸಿಕೊಂಡು, ವೈಜ್ಞಾನಿಕವಾಗಿ ಪುಟ್‌ಪಾತ್‌ಗಳನ್ನು ನಿರ್ಮಾಣ ಮಾಡಲು ಯಾವ ರೀತಿಯ ಕ್ರಮಗಳನ್ನು ಸರ್ಕಾರದಿಂದ ನಿರೀಕ್ಷಿಸಲಾಗುವುದು ?

## ಬೆಂಗಳೂರು ನಗರದಲ್ಲಿನ ಟ್ರಾಫಿಕ್ ಸಮಸ್ಯೆ

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೦೦ (೨೦೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರದಲ್ಲಿ ದಿನೇ ದಿನೇ ಟ್ರಾಫಿಕ್ ಸಮಸ್ಯೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಟ್ರಾಫಿಕ್ ಸಮಸ್ಯೆಗಳು ಹೆಚ್ಚಾಗಲು ಕಾರಣಗಳೇನು; (ವಿವರ ನೀಡುವುದು)

(ಇ) ಇದನ್ನು ಸರಿಪಡಿಸಲು ಟ್ರಾಫಿಕ್ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ; ಸಮಸ್ಯೆಯನ್ನು ಪರಿಹರಿಸಲು ಇನ್ನಷ್ಟು ಸಿಬ್ಬಂದಿಗಳನ್ನು ನಿಯೋಜಿಸುವ ಬಗ್ಗೆ ಸರ್ಕಾರ ಚಿಂತಿಸಿದೆಯೇ ;

(ಈ) ವೈಜ್ಞಾನಿಕವಾಗಿ ಟ್ರಾಫಿಕ್ ಸಮಸ್ಯೆಯನ್ನು ಬಗೆಹರಿಸಲು ಈವರೆಗೆ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ;

(ಉ) ಈ ಸಮಸ್ಯೆ ಬಗೆಹರಿಸಲು ದೆಹಲಿ ಮಾದರಿಯಲ್ಲಿ ಸಮ–ಬೆಸ ಸಂಖ್ಯೆ ವಿಧಾನವನ್ನು ಬಳಸಿ ಟ್ರಾಫಿಕ್ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸರ್ಕಾರ ಚಿಂತಿಸಿದೆಯೇ ?

## ರಾಜ ಕಾಲುವೆಗಳು ಮತ್ತು ಕೆರೆಗಳ ಒತ್ತುವರಿ

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೦೧ (೨೦೦) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಬರವ ರಾಜಕಾಲುವೆಗಳು ಮತ್ತು ಕೆರೆಗಳ ಸಂಖ್ಯೆ ಎಷ್ಟು ; (ವಾರ್ಡ್‌ವಾರು ಇವುಗಳ ಹೆಸರು ಸಹಿತ ಮಾಹಿತಿ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ರಾಜಕಾಲುವೆ ಮತ್ತು ಕೆರೆಗಳು ಒತ್ತುವರಿಯಾಗಿರುವ ಎಷ್ಟು ಪ್ರಕರಣಗಳು ದಾಖಲಾಗಿವೆ ; ಎಲ್ಲೆಲ್ಲಿ ಒತ್ತುವರಿಯಾಗಿವೆ ; (ವಾರ್ಡ್‌ವಾರು ಮತ್ತು ವರ್ಷವಾರು ಮಾಹಿತಿ ನೀಡುವುದು)

(ಇ) ರಾಜಕಾಲುವೆ ಮತ್ತು ಕೆರೆಗಳು ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ; ಬಂದಿದ್ದಲ್ಲಿ, ಸರ್ಕಾರ ಇದುವರೆಗೂ ಕೈಗೊಂಡಿರುವ ಕ್ರಮಗಳೇನು ;

(ಈ) ಒತ್ತುವರಿ ಮಾಡಿರುವವರ ಬಗ್ಗೆ ಸರ್ಕಾರಕ್ಕೆ ಮಾಹಿತಿಯಿಲ್ಲವೇ; ಇದ್ದಲ್ಲಿ ಅಂತಹವರ ವಿರುದ್ಧ ಜರುಗಿಸಲಾಗಿರುವ ಕ್ರಮಗಳೇನು;

(ಉ) ಒತ್ತುವರಿದಾರರ ವಿರುದ್ಧ ಕಠಿಣವಾದ ಕ್ರಮಗಳನ್ನು ಕೈಗೊಳ್ಳಲು ಕಾನೂನು ರೂಪಿಸುವ ಬಗ್ಗೆ ಚಿಂತನೆ ಇದೆಯೇ ?

# ತ್ಯಾಜ್ಯ ವಸ್ತುಗಳ ಮರು ಬಳಕೆ

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೦೨ (೩೩೨) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರವು ೨೦೧೫–೧೬ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿದಂತೆ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಟ್ಟಡ ತ್ಯಾಜ್ಯ ಸಾಮಗ್ರಿಗಳನ್ನು ಮರು ಬಳಕೆಗೆ ಮರಳು, ಇಟ್ಟಿಗೆ ಹಾಗೂ ಇತರೆ ಉಪಯುಕ್ತ ವಸ್ತುಗಳನ್ನು ತಯಾರಿಸಿ ಬಳಸುವ ಯೋಜನೆ ಬಗ್ಗೆ ರೂ. ೫ ಕೋಟಿ ರೂಪಾಯಿಗಳನ್ನು ಒದಗಿಸಿದ್ದು, ಇದರ ಅನುಷ್ಠಾನ ಯಾವ ಮಟ್ಟದಲ್ಲಿದೆ ; (ವಿವರ ನೀಡುವುದು)

(ಆ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ತ್ಯಾಜ್ಯ ವಸ್ತುಗಳನ್ನು ಮರು ಬಳಕೆ ಮಾಡುವ ಬದಲು ಓ.ಎಫ್.ಸಿ. ಕಂಪನಿಗಳು, ಬಿ.ಡಬ್ಲ್ಯೂ.ಎಸ್.ಎಸ್.ಬಿ., ಬೆಸ್ಕಾಂ, ಕೆ.ಪಿ.ಟಿ.ಸಿ.ಎಲ್. ಹಾಗೂ ಬಿ.ಎಂ.ಆರ್.ಸಿ.ಎಲ್. ಸಂಸ್ಥೆಗಳು ರಸ್ತೆ ಅಗೆತದಲ್ಲಿ ಉದ್ಭವಿಸುವ ತ್ಯಾಜ್ಯಗಳಂದ ಜಲ್ಲಿ, ಮರಳು, ಮಣ್ಣುಗಳನ್ನು ರಸ್ತೆ ಗುಂಡಿ ಮುಚ್ಚುವ ಅಥವಾ ರಸ್ತೆ ರಿಪೇರಿಗೆ ಪುನರ್ ಬಳಕೆ ಮಾಡುವ ಚಿಂತನೆ ಇದೆಯೇ ;

(ಇ) ಇದ್ದರೆ, ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರವು ಈವರೆಗೆ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಈ) ಈ ಯೋಜನೆ ಅನುಷ್ಠಾನಗೊಳಿಸಲು ಇರುವ ತಾಂತ್ರಿಕ ಹಾಗೂ ಆಡಳಿತಾತ್ಮಕ ಕಾರಣಗಳೇನು ? (ವಿವರ ನೀಡುವುದು)

## ಗುಪ್ತದಳದ ಕಾರ್ಯವೈಕರಿ

**ಶ್ರೀಮತಿ ತಾರಾ ಅನೂರಾಧ (ನಾಮನಿರ್ದೇಶನ ಹೊಂದಿದವರು):–**

೨೦೩ (೨೧೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉಗ್ರಗಾಮಿ ಸಂಘಟನೆಗಳ ಮಾಹಿತಿದಾರರು/ನೈಜೆರಿಯನ್ ಪ್ರಜೆಗಳು/ವೀಸಾ ಅವಧಿ ಮುಕ್ತಾಯವಾದ ವಲಸಿಗರು/ಈಶಾನ್ಯ ರಾಜ್ಯಗಳ ನಾಗರೀಕರು ಇತ್ಯಾದಿಯವರು ಬೆಂಗಳೂರು ನಗರದಲ್ಲಿ ಪ್ರವೇಶ ಪಡೆಯುತ್ತಿದ್ದರೂ ವಾಸಿಸಲು ಆಗಾಗ್ಗೆ ಕಾನೂನು ಸುವ್ಯವಸ್ಥೆಗಳ ಸಮಸ್ಯೆಗಳನ್ನು ಉಂಟು ಮಾಡುತ್ತಿದ್ದರೂ ಕರ್ನಾಟಕ ಸರ್ಕಾರದ ಗುಪ್ತದಳ ಇಲಾಖೆ ಮುಂಜಾಗ್ರತಾ ಮಾಹಿತಿಗಳನ್ನು ಸಂಗ್ರಹಿಸಿ ಸರ್ಕಾರಕ್ಕೆ ನೀಡುವಲ್ಲಿ ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇತ್ತೀಚೆಗೆ ಹೊರ ರಾಜ್ಯದ ಕೆಲ ಪೋಲೀಸ್ ಅಧಿಕಾರಿಗಳು ಬೆಂಗಳೂರು ನಗರದಲ್ಲಿ ಎಷ್ಟು ಉಗ್ರರ ಮಾಹಿತಿದಾರರನ್ನು ಬಂಧಿಸಿ, ಕರೆದೊಯ್ದಿದ್ದಾರೆ ;

(ಇ) ಗುಪ್ತದಳ ಇಲಾಖೆಯ ಕಾರ್ಯಗಳನ್ನು ಪರಿಣಾಮಕಾರಿಗೊಳಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳುವುದೇ ?

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ದೂರು ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೪ (೨೧೩) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರ ಅಭಿವೃದ್ಧಿಗೆ ಯಾವ ಯಾವ ಹುದ್ದೆಗಳಲ್ಲಿ ಯಾವ ಯಾವ ಇಲಾಖೆಯಿಂದ ನಿಯೋಜನೆಗೊಂಡು ಎಷ್ಟೆಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ ; ಹೆಸರು ಮತ್ತು ಹುದ್ದೆ ಹಾಗೂ ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ ; (ವಿವರ ಒದಗಿಸುವುದು)

(ಆ) ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಯಾವ ಯಾವ ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರದಲ್ಲಿ ಲೋಕಾಯುಕ್ತದಡಿಯಲ್ಲಿ ಮೊಕದ್ದಮ್ಮೆ ದಾಖಲಾಗಿರುತ್ತವೆ ;

(ಇ) ಎಷ್ಟು ವರ್ಷಗಳಿಂದ ಲೋಕಾಯುಕ್ತ ಮೊಕದ್ದಮ್ಮೆಗಳು ಬಾಕಿ ಇವೆ ;

(ಈ) ಲೋಕಾಯುಕ್ತರ ಮೊಕದ್ದಮ್ಮೆ ಎದುರಿಸುತ್ತಿರುವ ಅಧಿಕಾರಿಗಳನ್ನು ಮುಂದುವರೆಸಲು ಕಾರಣಗಳೇನು ?

## ಕೋಲಾರ ಜಿಲ್ಲೆಯ ವಿವಿಧ ಇಲಾಖೆಗಳ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ಮೊಕದ್ದಮ್ಮೆ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೫ (೨೧೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೋಲಾರ ಜಿಲ್ಲೆಯ ವ್ಯಾಪ್ತಿಯಲ್ಲಿ ವಿವಿಧ ಸರ್ಕಾರದ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ವಿರುದ್ಧ ಲೋಕಾಯುಕ್ತದಲ್ಲಿ ಹೂಡಲಾಗಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು ; ಅಮಾನತ್ತುಜಗೊಂಡ ಅಧಿಕಾರಿಗಳ ಸಂಖ್ಯೆ ಎಷ್ಟು ; (ವಿವರ ಒದಗಿಸುವುದು)

(ಆ) ಲೋಕಾಯುಕ್ತ ಮೊಕದ್ದಮ್ಮೆಯನ್ನು ಎದುರಿಸುತ್ತಿರುವ ಅಧಿಕಾರಿಗಳನ್ನು ಅದೇ ಇಲಾಖೆಯಲ್ಲಿಯೇ ಮುಂದುವರೆಸಲಾಗಿದೆಯೇ ; ಹಾಗಿದ್ದಲ್ಲಿ, ಹೆಸರು ಮತ್ತು ಹುದ್ದೆ ಎದುರಿಸುತ್ತಿರುವ ಪ್ರಕರಣಗಳ ವಿವರ ನೀಡುವುದು ?

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಛೇರಿಯಲ್ಲಿ ಲೋಕಾಯುಕ್ತರ ಕಛೇರಿಯನ್ನು ಪ್ರಾರಂಭಿಸುವ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೬ (೨೧೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಛೇರಿಯಲ್ಲಿ ಲೋಕಾಯುಕ್ತ ಕಛೇರಿಯನ್ನು ಆರಂಭಿಸಲಾಗಿದೆಯೇ ;

(ಆ) ಹಾಗಿದ್ದಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಡೆಯುತ್ತಿರುವ ಹಾಗೂ ನಡೆದಿರುವ ಭ್ರಷ್ಟಾಚಾರದ ವಿರುದ್ಧ ಎಷ್ಟು ಮೊಕದ್ದಮ್ಮೆಗಳು ದಾಖಲಾಗಿದೆ ; (ಅವರುಗಳ ಹೆಸರು ಹಾಗೂ ಹುದ್ದೆಯ ವಿವರಗಳನ್ನು ಒದಗಿಸುವುದು)

(ಇ) ಮೊಕದ್ದಮ್ಮೆ ದಾಖಲಾಗಿರುವವರ ವಿರುದ್ಧ ಲೋಕಾಯುಕ್ತ ತೆಗೆದುಕೊಂಡ ಕ್ರಮ ಏನು ;

(ಈ) ಮೊಕದ್ದಮ್ಮೆಯನ್ನು ಎದುರಿಸುತ್ತಿರುವ ಅಧಿಕಾರಿಗಳನ್ನು ಸರ್ಕಾರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಮಾನತ್ತುಗೊಳಿಸಿದೆಯೇ; ಇಲ್ಲದಿದ್ದಲ್ಲಿ ಕಾರಣವೇನು ; ಮಾಡಿದ್ದಲ್ಲಿ ಅಧಿಕಾರಿಗಳ ಹೆಸರು, ಹುದ್ದೆ ಆದೇಶಗಳನ್ನು ಒಳಗೊಂಡ ವಿವರವನ್ನು ಒದಗಿಸುವುದು?

## ಕೋಲಾರ ಜಿಲ್ಲೆಯ ಎಲ್ಲಾ ಇಲಾಖೆಗಳಿಗೆ SCP/TSP ಅಡಿಯಲ್ಲಿ ಒದಗಿಸಿರುವ ಅನುದಾನ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೭ (೨೧೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೋಲಾರ ಜಿಲ್ಲೆಯ ಎಲ್ಲಾ ಇಲಾಖೆಗಳಿಗೆ ವಿವಿಧ ಕಾರ್ಯಕ್ರಮಗಳಿಗೆ SCP/TSP ಅಡಿಯಲ್ಲಿ ಬಿಡುಗಡೆಯಾದ ಹಣ ಎಷ್ಟು ; ಇದುವರೆವಿಗೂ ೨೦೧೫–೧೬ನೇ ಸಾಲಿನಲ್ಲಿ ಖರ್ಚಾದ ಮೊತ್ತ ಎಷ್ಟು ; ಬಾಕಿ ಉಳಿದಿರುವ ಹಣ ಎಷ್ಟು ;

(ಆ) ಯಾವ ಯಾವ ಇಲಾಖೆಗಳಿಗೆ ಯಾವ ಯಾವ ಕಾರ್ಯಕ್ರಮಗಳಲ್ಲಿ ಬಿಡುಗಡೆಯಾದ ಅನುದಾನವನ್ನು ವಿನಿಯೋಗಿಸಲಾಗಿದೆ ?

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೮ (೨೮೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೋಲಾರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು;

(ಆ) ಇದುವರೆವಿಗೂ ಪರಿಹಾರ ಪಡೆದವರ ಸಂಖ್ಯೆ ಎಷ್ಟು ;

(ಇ) ಮೇಲ್ಕಂಡ ಪ್ರಕರಣಗಳು ಇತ್ಯರ್ಥವಾಗಲು ಯಾವ ಹಂತದಲ್ಲಿ ಇರುತ್ತಿವೆ ;

(ಈ) ಪರಿಹಾರ ನೀಡದೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ?

## ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯ ಅಕ್ಕಿ ಗಿರಣಿಯನ್ನು ಸ್ಥಳಾಂತರಿಸುವ ಬಗ್ಗೆ

**ಶ್ರೀ ಐವನ್ ಡಿ. ಸೋಜಾ (ನಾಮನಿರ್ದೇಶನ ಹೊಂದಿದವರು):–**

೨೯ (೨೬೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯು ಅಕ್ಕಿ ಗಿರಣಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಇದನ್ನು ಸ್ಥಳಾಂತರಿಸಲು ಇಲಾಖೆ ಸದನದಲ್ಲಿ ಭರವಸೆ ನೀಡಿದ್ದರೂ ಇನ್ನೂ ಸ್ಥಳಾಂತರಿಸದಿರಲು ಕಾರಣವೇನು ; (ವಿವರ ಒದಗಿಸುವುದು)

(ಆ) ಪೊಲೀಸ್ ಠಾಣೆಯಲ್ಲಿ ಸೌರಶಕ್ತಿ ಮೇಲ್ಚಾವಣೆಯನ್ನು ಅಳವಡಿಸಲು ಇಲಾಖೆ ಕ್ರಮ ಕೈಗೊಳ್ಳುವುದೇ ; ರಾಜ್ಯದಲ್ಲಿ ಎಷ್ಟು ಪೊಲೀಸ್ ಠಾಣೆಗಳಲ್ಲಿ ಸೌರಶಕ್ತಿ ಘಟಕಗಳನ್ನು ಅಳವಡಿಸಲಾಗಿದೆ ; (ವಿವರ ನೀಡುವುದು)

(ಇ) ೨೦೧೪–೧೫ ಮತ್ತು ೨೦೧೫–೧೬ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಣೆಯಾದ, ವಿಷಕಾರಿಯಿಂದ ಸಾವನ್ನಪ್ಪಿದ ಪ್ರಕರಣಗಳೆಷ್ಟು ; (ವಿವರ ನೀಡುವುದು) ಯಾವ ಕಾರಣಕ್ಕಾಗಿ ಮೇಲಿನ ಪ್ರಕರಣಗಳು ಸಂಭವಿಸಿದೆ ; (ವಿವರ ಒದಗಿಸುವುದು) (ಕಾಣೆಯಾದ ಪ್ರಕರಣಗಳ ಬಗ್ಗೆ ಪೊಲೀಸ್ ಠಾಣೆವಾರು ವಿವರ ಒದಗಿಸುವುದು)

(ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಅತ್ಯಾಚಾರ ಪ್ರಕರಣಗಳು ದಾಖಲಾಗಿದೆ ; ಎಷ್ಟು ಜನರಿಗೆ ಪರಿಹಾರ ಒದಗಿಸಲಾಗಿದೆ ; (ವಿವರ ನೀಡುವುದು)

(ಉ) ೨೦೧೪-೧೫ ಮತ್ತು ೨೦೧೫-೧೬ ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ.ಜಾತಿ/ಪ.ವರ್ಗಗಳ ಮೇಲೆ ಎಷ್ಟು ಜಾತಿ ನಿಂದನೆ ಮತ್ತು ಹಲ್ಲೆ ಪ್ರಕರಣಗಳು ದಾಖಲಾಗಿದೆ ; ಎಷ್ಟು ಪರಿಹಾರಧನ ವಿತರಿಸಲಾಗಿದೆ ; ಎಷ್ಟು ಪ್ರಕರಣಗಳಲ್ಲಿ ಅಂತಿಮ ವರದಿ ಸಲ್ಲಿಸಲಾಗಿದೆ ? (ಠಾಣಾವಾರು ವಿವರ ನೀಡುವುದು)

## ಪೊಲೀಸ್ ಸಿಬ್ಬಂದಿಗಳಿಂದಲೇ ಮೇಲಾಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಿದರ ಬಗ್ಗೆ

**ಶ್ರೀ ಐವನ್ ಡಿ. ಸೋಜಾ (ನಾಮನಿರ್ದೇಶನ ಹೊಂದಿದವರು):-**

೨೧೦ (೨೬೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಗಳೂರು ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಪೊಲೀಸರೇ ಠಾಣೆಯ ಹೊರಗೆ ಬಂದು ಮೇಲಾಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಿದ ಬಗ್ಗೆ ಇಲಾಖೆ ಕೈಗೊಂಡ ಕ್ರಮವೇನು; (ವಿವರ ನೀಡುವುದು)

(ಆ) ಪೊಲೀಸ್ ಸಿಬ್ಬಂದಿಗಳಿಂದಲೇ ಮೇಲಾಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಿ ಠಾಣೆಯಿಂದ ಹೊರ ನಡೆದ ಘಟನೆಗಳು ನಡೆದಿದ್ದು, ರಾಜ್ಯದಲ್ಲಿ ಇಂತಹ ಎಷ್ಟು ಘಟನೆಗಳು ನಡೆದಿವೆ ; (ವಿವರ ನೀಡುವುದು)

(ಇ) ಮಂಗಳೂರು ನಗರದ ಪೊಲೀಸ್ ಇಲಾಖೆಯಲ್ಲಿನ ಸಿಬ್ಬಂದಿಗಳ ಸಂಖ್ಯೆಯನ್ನು ಹೆಚ್ಚಿಸಲು ಇಲಾಖೆ ಕ್ರಮ ಕೈಗೊಂಡಿದೆಯೇ ; ಪ್ರಸ್ತುತ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೊಲೀಸರ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೊಲೀಸ್ ಸಂಖ್ಯೆಯನ್ನು ಹೆಚ್ಚಿಸಲು ಇಲಾಖೆ ಕ್ರಮ ಕೈಗೊಂಡಿದೆಯೇ ; (ವಿವರ ಒದಗಿಸುವುದು) ಮಂಗಳೂರು ಪೊಲೀಸ್ ಕಮಿಷನರೇಟ್ ಮತ್ತು ಜಿಲ್ಲಾ ಪೊಲೀಸ್ ವ್ಯಾಪ್ತಿಯಲ್ಲಿ ಖಾಲಿ ಇರುವ ಪೊಲೀಸರ ಮತ್ತು ಅಧಿಕಾರಿಗಳ ಸಂಖ್ಯೆ ಎಷ್ಟು ; (ವಿವರ ಒದಗಿಸುವುದು)

(ಉ) ಮಂಗಳೂರು ನಗರ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗಳಿಗೆ ಒದಗಿಸಿರುವ ಪೊಲೀಸ್ ವಸತಿ ಗೃಹಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು) ಪ್ರಸ್ತುತ ಬೇಡಿಕೆ ಇರುವ ವಸತಿ ಗೃಹಗಳ ಸಂಖ್ಯೆ ಎಷ್ಟು ; ಇಲಾಖೆಯಿಂದ ಎಷ್ಟು ವಸತಿಗೃಹಗಳನ್ನು ಕಟ್ಟಿಸಲು ಯೋಜನೆ ಇದೆ ? (ವಿವರ ನೀಡುವುದು)

## ಪೌರ ಕಾರ್ಮಿಕರನ್ನು ಖಾಯಂಗೊಳಿಸುವ ಬಗ್ಗೆ

**ಶ್ರೀ ಐವನ್ ಡಿ ಸೋಜಾ (ನಾಮನಿರ್ದೇಶನ ಹೊಂದಿದವರು):–**

೨೧೨ (೨೬೩) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಎಷ್ಟು ಪೌರ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದಾರೆ; ಪೌರ ಕಾರ್ಮಿಕರನ್ನು ಖಾಯಂಗೊಳಿಸಲು ಇಲಾಖೆ ಕೈಗೊಂಡ ಕ್ರಮಗಳೇನು ; ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಪಾವತಿಸುವ ವೇತನ ಎಷ್ಟು ಮತ್ತು ಸೌಲಭ್ಯಗಳು ಯಾವುವು ; (ವಿವರ ಒದಗಿಸುವುದು)

(ಆ) ಮಂಗಳೂರು ಮಹಾಕಾಳಿಪಡ್ಡುವಿನಲ್ಲಿ ವಾಸಕ್ಕೆ ಅಪಾಯಕಾರಿಯಾದ ಪೌರ ಕಾಲೋನಿಯಲ್ಲಿನ ಕಟ್ಟಡವನ್ನು ಕೆಡವಿ ಹೊಸ ಕಟ್ಟಡ ರಚನೆ ಮಾಡುವುದಾಗಿ ಸದನದಲ್ಲಿ ಹೇಳಿಕೆ ನೀಡಿದ್ದರೂ ಇನ್ನೂ ಕಾರ್ಯಗತಗೊಳ್ಳದೇ ಇರುವುದಕ್ಕೆ ಕಾರಣಗಳೇನು ;

(ಇ) ರಾಜ್ಯದಲ್ಲಿ ಎಷ್ಟು ಪೌರ ಕಾರ್ಮಿಕರಿಗೆ ಸ್ವಂತ ನಿವೇಶನ/ಮನೆಯನ್ನು ಒದಗಿಸಲಾಗಿದೆ ; ಬಾಕಿ ಇರುವ ಅರ್ಜಿಗಳೆಷ್ಟು ; (ವಿವರ ಒದಗಿಸುವುದು)

(ಈ) ಮಂಗಳೂರು ಮಹಾನಗರಪಾಲಿಕೆಯ ಪೌರ ಕಾರ್ಮಿಕರನ್ನು ಖಾಯಂಗೊಳಿಸಬೇಕೆಂದು ನಗರಪಾಲಿಕೆ ನಿರ್ಣಯವನ್ನು ಅಂಗೀಕರಿಸದಿರಲು ಕಾರಣಗಳೇನು ? (ವಿವರ ನೀಡುವುದು)

## ಮಂಗಳೂರು ಮಹಾನಗರ ಪಾಲಿಕೆಯ ಕಸ ವಿಲೇವಾರಿ ಗುತ್ತಿಗೆ ನೀಡಿದ ಬಗ್ಗೆ

**ಶ್ರೀ ಐವನ್ ಡಿ ಸೋಜಾ (ನಾಮನಿರ್ದೇಶನ ಹೊಂದಿದವರು):–**

೨೧೩ (೨೬೪) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕಸ ವಿಲೇವಾರಿ ಗುತ್ತಿಗೆದಾರರಿಗೆ ಹಣವನ್ನು ಪಾವತಿಸದಿರುವುದರಿಂದ ಮುಷ್ಕರ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಗುತ್ತಿಗೆದಾರರ ಬಾಕಿಯುನ್ನು ಪಾವತಿಸದಿರಲು ಕಾರಣಗಳೇನು; (ವಿವರ ನೀಡುವುದು)

(ಆ) ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು ಎಷ್ಟು ಕಸ ಸಂಗ್ರಹವಾಗುತ್ತದೆ ; ಗುತ್ತಿಗೆದಾರರಿಗೆ ತಿಂಗಳೊಂದಕ್ಕೆ ಪಾವತಿ ಮಾಡುವ ಹಣ ಎಷ್ಟು ; ಗುತ್ತಿಗೆದಾರರು ಕರಾರು ಉಲ್ಲಂಘಿಸಿದ್ದರ ಬಗ್ಗೆ ನಗರ ಪಾಲಿಕೆಯು ಕ್ರಮ ಕೈಗೊಳ್ಳದೇ ಇರಲು ಕಾರಣಗಳೇನು ; (ವಿವರ ನೀಡುವುದು)

(ಇ) ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಸ ವಿಲೇವಾರಿಗಾಗಿ ಗ್ರಾಹಕರಿಂದ ಸಂಗ್ರಹವಾಗುವ ಒಟ್ಟು ಮೊತ್ತ ಎಷ್ಟು ; ಪ್ರತಿಯೊಂದು ಕುಟುಂಬಕ್ಕೆ ವಿಧಿಸುವ ದರ ಎಷ್ಟು ? (ವಿವರ ನೀಡುವುದು)

## ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಸೇವಾ ಭದ್ರತೆ ಒದಗಿಸುವ ಬಗ್ಗೆ.

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):–**

೨೧೪ (೨೬೬) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರಿ ಪದವಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರುಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ; ಇವರಿಗೆ ತಿಂಗಳಿಗೆ ಎಷ್ಟು ವೇತನ ನೀಡಲಾಗುತ್ತಿದೆ ;

(ಆ) ಅತಿಥಿ ಉಪನ್ಯಾಸಕರುಗಳನ್ನು ಆಯ್ಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ನಿಬಂಧನೆ ಷರತ್ತುಗಳಿಗೊಳಪಟ್ಟು ಆಯ್ಕೆ ಮಾಡಿಕೊಳ್ಳಲಾಗಿದೆಯೇ ; (ವಿವರ ನೀಡುವುದು)

(ಇ) ಯಾವುದೇ ಸೇವಾಭದ್ರತೆ ಇಲ್ಲದೆಯೇ ಅತೀ ಕಡಿಮೆ ವೇತನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇವರುಗಳ ವೇತನ ಹೆಚ್ಚಳ ಮಾಡಿ ಸೇವಾ ಭದ್ರತೆಯನ್ನು ಒದಗಿಸಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳುವುದೇ ?

## ಬೆಳಗಾವಿಯಲ್ಲಿ KAT ಯನ್ನು ಕಾರ್ಯಾರಂಭ ಮಾಡುವ ಬಗ್ಗೆ

ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–

೨೧೫ (೨೬೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರವು ಬೆಳಗಾವಿಯಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಕರ್ನಾಟಕ ಆಡಳಿತ ನ್ಯಾಯಮಂಡಳಿ ಕಛೇರಿಯ ಸ್ಥಾಪನೆಯು ಯಾವ ಹಂತದಲ್ಲಿದೆ ;

(ಆ) ಬೆಳಗಾವಿಯ ಯಾವ ಸ್ಥಳದಲ್ಲಿ ಕರ್ನಾಟಕ ಆಡಳಿತ ನ್ಯಾಯಮಂಡಳಿಯನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ;

(ಇ) ಬೆಳಗಾವಿಯಲ್ಲಿ ಕರ್ನಾಟಕ ಆಡಳಿತ ನ್ಯಾಯಮಂಡಳಿ ಕಾರ್ಯಾರಂಭ ಮಾಡಲು ಬೇಕಾಗುವ ಕಾಲಾವಧಿ ಎಷ್ಟು ?

## ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ ಪ್ರಕರಣಗಳ ವಿವರ ನೀಡುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):–**

೨೧೬ (೨೬೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯಗಳಾದ ಬೆಂಗಳೂರು, ಧಾರವಾಡ ಹಾಗೂ ಕಲಬುರಗಿ ನ್ಯಾಯಾಲಯಗಳಲ್ಲಿ ಎಷ್ಟು ಕೇಸುಗಳು ವಿಚಾರಣೆಗಾಗಿ ಬಾಕಿ ಉಳಿದಿರುತ್ತವೆ ; (ಕೇಸುಗಳವಾರು ವಿವರ ಒದಗಿಸುವುದು)

(ಆ) ಕೆಳಹಂತದ ಕೋರ್ಟುಗಳಲ್ಲಿ (ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರ ಸ್ಥಳಗಳಲ್ಲಿ) ಎಷ್ಟು ಕೇಸುಗಳು ವಿಚಾರಣೆಗಾಗಿ ಬಾಕಿ ಉಳಿದಿರುತ್ತವೆ ; (ವಿವರ ನೀಡುವುದು)

(ಇ) ಐದು ವರ್ಷಗಳ ಮೇಲ್ಪಟ್ಟು ಇತ್ಯರ್ಥವಾಗದೆ ಉಳಿದಿರುವ ಕೇಸುಗಳ ಸಂಖ್ಯೆ ಎಷ್ಟು ;

(ಈ) ಇವುಗಳನ್ನು ಆದ್ಯತೆಯ ಮೇರಗೆ ಇತ್ಯರ್ಥಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ ?

## ಜಿಲ್ಲಾ ಕೇಂದ್ರ ವಕೀಲ ವೃತ್ತಿ ಮಾಡುತ್ತಿರುವ ಅಡ್ವೋಕೇಟ್‌ಗಳನ್ನು ಹೈಕೋರ್ಟ್ ನ್ಯಾಯಾಧೀಶರ ಹುದ್ದೆಗಳಿಗೆ ನೇಮಿಸುವ ಬಗ್ಗೆ.

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):–**

೨೧೭ (೨೬೯) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು, ಧಾರವಾಡ ಹಾಗೂ ಕಲಬುರಗಿ ಹೈಕೋರ್ಟ್‌ಗಳಲ್ಲಿ ಮಂಜೂರಾಗಿರುವ ನ್ಯಾಯಾಧೀಶರ ಹುದ್ದೆಗಳ ಸಂಖ್ಯೆ ಎಷ್ಟು ; ಯಾವ ಯಾವ ಹೈಕೋರ್ಟ್‌ಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇರುತ್ತವೆ ; ಹಾಗೂ ಅವುಗಳನ್ನು ತುಂಬಲು ಯಾವ ಕ್ರಮ ಕೈಗೊಳ್ಳಲಾಗುತ್ತಿದೆ ;

(ಆ) ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ಧಾರವಾಡ ಮತ್ತು ಕಲಬುರಗಿ ಹೈಕೋರ್ಟ್‌ಗಳಲ್ಲಿ ವಕೀಲಿ ವೃತ್ತಿ ಮಾಡುತ್ತಿರುವ ಅಡ್ವೋಕೇಟ್‌ಗಳು ಸಹ ಹೈಕೋರ್ಟ್ ನ್ಯಾಯಾಧೀಶರಾಗುವ ಅರ್ಹತೆಗಳನ್ನು

ಹೊಂದಿದ್ದು, ಹೈಕೋರ್ಟ್ ನ್ಯಾಯಾಧೀಶರನ್ನು ನೇಮಿಸುವ ಕಾಲಕ್ಕೆ ಇವರನ್ನು ಸಹ ನೇಮಿಸಲು ಪರಿಗಣಿಸಲಾಗುವುದೇ ?

## ಸರ್ಕಾರಿ ಹಾಗೂ ಅನುದಾನ ಪಡೆಯುತ್ತಿರುವ ಪದವಿ ಕಾಲೇಜುಗಳ ಪ್ರಾಚಾರ್ಯರ ಹುದ್ದೆಗಳನ್ನು ತುಂಬುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):–**

೨೧೮ (೨೭೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಸರ್ಕಾರಿ ಪದವಿ ಕಾಲೇಜುಗಳ ಸಂಖ್ಯೆ ಎಷ್ಟು ;

(ಆ) ಆ ಪೈಕಿ ಅನುದಾನ ಪಡೆಯುತ್ತಿರುವ ಪದವಿ ಕಾಲೇಜುಗಳ ಸಂಖ್ಯೆ ಎಷ್ಟು ;

(ಇ) ಎಷ್ಟು ಸರ್ಕಾರಿ ಪದವಿ ಕಾಲೇಜುಗಳಲ್ಲಿ ಪ್ರಾಚಾರ್ಯರ ಹುದ್ದೆ ಖಾಲಿ ಇರುತ್ತವೆ ; ಹಾಗೂ ಅವುಗಳನ್ನು ತುಂಬಲು ಯಾವ ಕ್ರಮ ಕೈಗೊಳ್ಳಲಾಗುತ್ತಿರ್ದೆ ; ಯಾವ ಕಾಲಮಿತಿಯೊಳಗಾಗಿ ಈ ಹುದ್ದೆಗಳನ್ನು ತುಂಬಲಾಗುವುದು ;

(ಈ) ಅನುದಾನ ಪಡೆಯುತ್ತಿರುವ ಎಷ್ಟು ಪದವಿ ಕಾಲೇಜುಗಳಲ್ಲಿ ಪ್ರಾಚಾರ್ಯರ ಹುದ್ದೆ ಖಾಲಿ ಇರುತ್ತವೆ ; ಅವುಗಳನ್ನು ತುಂಬಲು ಯಾವ ಕ್ರಮ ಕೈಗೊಳ್ಳಲಾಗುತ್ತಿದೆ ; ಯಾವ ಕಾಲಮಿತಿಯೊಳಗಾಗಿ ಈ ಹುದ್ದೆಗಳನ್ನು ತುಂಬಲಾಗುವುದು ;

(ಉ) ಖಾಲಿ ಇರುವ ಹುದ್ದೆಗಳನ್ನು ತುಂಬಲು ವಿಳಂಬವಾಗಲು ಕಾರಣಗಳೇನು ;

(ಊ) ಹುದ್ದೆಗಳನ್ನು ತುಂಬಲು ವಿಳಂಬವಾಗುತ್ತಿರುವುದರಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿರುವುದರಿಂದ ಕೂಡಲೇ ಹುದ್ದೆ ತುಂಬಲಾಗುವುದೇ ?

## ಬಡಾವಣೆ ನಿರ್ಮಾಣಕ್ಕಾಗಿ ಭೂಸ್ವಾಧೀನ

**ಶ್ರೀ ಡಿ.ಯು. ಮಲ್ಲಿಕಾರ್ಜುನ (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೯ (೨೭೪) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸುತ್ತಿರುವ ಬಡಾವಣೆಗಳಿಗೆ ಭೂ ಸ್ವಾಧೀನವಾಗಿರುವ ಜಮೀನುಗಳ ಬದಲಾಗಿ, ಬದಲಿ ನಿವೇಶನವನ್ನು ಪರಿಹಾರವಾಗಿ ನೀಡಿರುವ ಪ್ರಕರಣಗಳೆಷ್ಟು ; ಬದಲಿ ನಿವೇಶನಗಳನ್ನು ಪರಿಹಾರವಾಗಿ ನೀಡುವಂತೆ ಕೋರಿರುವ ಅರ್ಜಿಗಳಲ್ಲಿ ಬಾಕಿ ಇರುವ ಅರ್ಜಿಗಳೆಷ್ಟು ;

(ಆ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಯಾವ ಯಾವ ವಿಧಾನಸಭಾ ಕ್ಷೇತ್ರಗಳಲ್ಲಿ ಡಯಾಲಿಸಿಸ್ ಮತ್ತು ಮಧುಮೇಹ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ;

(ಇ) ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿಯೂ ಇವುಗಳನ್ನು ಸ್ಥಾಪಿಸದಿರಲು ಕಾರಣವೇನು ;

(ಈ) ಬೆಂಗಳೂರು ನಗರದಲ್ಲಿನ ಪಾಲಿಕೆ ಆಸ್ತಿಗಳನ್ನು ಹತ್ತು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಎಷ್ಟು ಸಂಘ ಸಂಸ್ಥೆಗಳಿಗೆ ಹಾಗೂ ಖಾಸಗಿಯವರಿಗೆ ನೀಡಲಾಗಿದೆ; (ಪೂರ್ಣ ವಿವರ ನೀಡುವುದು)

(ಉ) ಪಾಲಿಕೆಗೆ ಇದರಿಂದ ಬರುತ್ತಿರುವ ಆದಾಯವೆಷ್ಟು ; ಬಾಕಿ ಉಳಿಸಿಕೊಂಡಿರುವ ಸಂಸ್ಥೆಗಳು ಎಷ್ಟು ?

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬಡಾವಣೆ ನಿರ್ಮಾಣ

**ಶ್ರೀ ಡಿ.ಯು. ಮಲ್ಲಿಕಾರ್ಜುನ (ವಿಧಾನಸಭೆಯಿಂದ ಚುನಾಯಿತರಾದವರು):–**

೨೨೦(೨೭೫) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ೨೦೦೧ ರಿಂದ ಇಲ್ಲಿಯವರೆಗೆ ಎಷ್ಟು ಬಡಾವಣೆಗಳನ್ನು ನಿರ್ಮಿಸಿದೆ ;

(ಆ) ಸದರಿ ಬಡಾವಣೆಗಳಲ್ಲಿ ಯಾವ ಯಾವ ರೀತಿಯ ನಿವೇಶನಗಳನ್ನು ಅಭಿವೃದ್ಧಿ ಪಡಿಸಲಾಗಿದೆ ;

(ಇ) ಅಭಿವೃದ್ಧಿ ಪಡಿಸಲಾದ ಒಟ್ಟು ನಿವೇಶನಗಳು ಎಷ್ಟು ; ಇವುಗಳಲ್ಲಿ ಹಂಚಿಕೆ ಮಾಡಲಾದ ನಿವೇಶನಗಳು ಎಷ್ಟು ; ಖಾಲಿ ಇರುವ ನಿವೇಶನಗಳು ಎಷ್ಟು ? (ಬಡಾವಣೆವಾರು ಮಾಹಿತಿ ನೀಡುವುದು)

## ಕುಡಿಯುವ ನೀರಿನ ಯೋಜನೆ ಬಗ್ಗೆ

ಶ್ರೀ ಡಿ.ಯು. ಮಲ್ಲಿಕಾರ್ಜುನ (ವಿಧಾನಸಭೆಯಿಂದ ಚುನಾಯಿತರಾದವರು):–

೨೨೧ (೨೭೨) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಬೆಂಗಳೂರು ದಕ್ಷಿಣಕ್ಕೆ ಸಂಬಂಧಿಸಿದಂತೆ ಹೊಸದಾಗಿ ಸೇರ್ಪಡೆಗೊಂಡ ಪ್ರದೇಶಗಳಿಗೆ ಕುಡಿಯುವ ನೀರು ಒದಗಿಸಲು ಇರುವ ಜಲಮಂಡಳಿಯ ಕ್ರಿಯಾ ಯೋಜನೆಗಳ ವಿವರಗಳೇನು ;

(ಆ) ಈ ಪೈಕಿ ಇನ್ನು ಎಷ್ಟು ಪ್ರದೇಶಗಳಿಗೆ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಯಾಗಬೇಕಾಗಿದೆ ;

(ಇ) ಈ ಪ್ರದೇಶಗಳ ನಾಗರಿಕರಿಗೆ ನೀರು ಒದಗಿಸಲು ಪ್ರೋರೇಟಾ ಶುಲ್ಕ ನಿಗಧಿಗೆ ಅನುಸರಿಸುತ್ತಿರುವ ಮಾನದಂಡಗಳೇನು ;

(ಈ) ಇದುವರೆವಿಗೂ ಈ ಪ್ರದೇಶಗಳಿಗೆ ನೀರಿನ ಸರಬರಾಜು ಆಗದಿರಲು ಕಾರಣಗಳೇನು ?

## ಕಸ ವಿಲೇವಾರಿ ಬಗ್ಗೆ

**ಶ್ರೀ ಡಿ. ಯು. ಮಲ್ಲಿಕಾರ್ಜುನ (ವಿಧಾನಸಭೆಯಿಂದ ಚುನಾಯಿತರಾದವರು):–**

೨೨೨ (೨೭೧) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರದಲ್ಲಿ ಕಸ ವಿಲೇವಾರಿಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಸಂಗ್ರಹವಾದ ಕಸವನ್ನು ಎಲ್ಲಿಗೆ ಸಾಗಿಸಲಾಗುತ್ತಿದೆ; (ವಿವರ ಒದಗಿಸುವುದು)

(ಆ) ತ್ಯಾಜ್ಯ ರಾಶಿಯಿಂದ ಮುಕ್ತವಾಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮುಖ್ಯ ರಸ್ತೆಗಳೆಂದು ಗುರುತಿಸಿರುವ ರಸ್ತೆಗಳು ಯಾವುವು ;

(ಈ) ಈ ಮೂರು ವರ್ಷಗಳಲ್ಲಿ ಸುಧಾರಣಾ ಕಾಮಗಾರಿಗೆ ಖರ್ಚಾದ ಹಣವೆಷ್ಟು ; ಕಳಪೆ ಕಾಮಗಾರಿಗೆ ಕಾರಣರಾದವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ?

## ಬೃಹತ್ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡುವುದು

**ಶ್ರೀ ಡಿ. ಯು. ಮಲ್ಲಿಕಾರ್ಜುನ (ವಿಧಾನಸಭೆಯಿಂದ ಚುನಾಯಿತರಾದವರು):–**

೨೨೩ (೨೭೩) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಡೆವಲಪರ್ಸ್‌ಗಳು ಬೃಹದಾಕಾರದ ಕಟ್ಟಡಗಳನ್ನು ನಿರ್ಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇವರುಗಳು ಯಾವ ಪ್ರಾಧಿಕಾರದಿಂದ ಅನುಮತಿಯನ್ನು ಪಡೆದಿರುತ್ತಾರೆ ಹಾಗೂ ವಲಯ ನಿಯಮಾವಳಿಯಂತೆ ಕಟ್ಟಡಗಳನ್ನು ನಿರ್ಮಿಸಿದ್ದಾರೆಯೇ ;

(ಆ) ಬೆಂಗಳೂರು ನಗರ ಜಿಲ್ಲೆಯಲ್ಲಿ ಹಸಿರು ವಲಯವೆಂದು ಗುರುತಿಸಿರುವ ಪ್ರದೇಶಗಳು ಯಾವುವು ; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

(ಇ) ಪ್ರಸ್ತುತ ಹಸಿರು ವಲಯದ ಜಾಗವನ್ನು ಯಾವಾಗ ರೂಪಿಸಲಾಯಿತು ; ಈಗ ಎಷ್ಟು ಜಾಗ ಬಾಕಿ ಉಳಿದಿರುತ್ತದೆ ; ವಲಯಗಳಿಗನುಗುಣವಾಗಿ ಇದುವರೆವಿಗೂ ಎಷ್ಟು ಸಿಡಿಪಿ ಗಳನ್ನು ಮಾಡಲಾಗಿದೆ ? (ಸಿಡಿಪಿ ಪ್ಲಾನ್‌ಗಳ ಸಹಿತ ವಿವರ ಒದಗಿಸುವುದು)

## ಆಯವ್ಯಯದಲ್ಲಿ ಹಂಚಿಕೆಯಾದ ಅನುದಾನ ಸರಿಯಾಗಿ ಬಿಡುಗಡೆಯಾಗದೆ ಇರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೨೪ (೨೮೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಆಯವ್ಯಯದಲ್ಲಿ ಹಂಚಿಕೆ ಮಾಡಲಾಗುವ ಹಣ ಸಮಯಕ್ಕೆ ಸರಿಯಾಗಿ ಬಿಡುಗಡೆಯಾಗದೆ ಇರುವುದರಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಮಾರ್ಚ್ ತಿಂಗಳಲ್ಲಿ ಆಯವ್ಯಯ ಮಂಡನೆ ಆದ ನಂತರ ಇಲಾಖಾವಾರು ಹಣಕಾಸಿನ ಹಂಚಿಕೆಯನ್ನು ಯಾವ ತಿಂಗಳಿನಲ್ಲಿ ಮಾಡಲಾಗುವುದು ;

(ಇ) ಅನುದಾನ ಬಿಡುಗಡೆ ವೇಳೆಗೆ ಸರಿಯಾಗಿ ಇಲಾಖಾವಾರು ಹಂಚಿಕೆಯಾಗದೆ ವರ್ಷದ ಅಂತ್ಯದಲ್ಲಿ ಬಿಡುಗಡೆಯಾಗುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಅನುದಾನದ ಹಂಚಿಕೆ ವಿಚಾರವಾಗಿ ತ್ರೈಮಾಸಿಕ ಹಣ ಬಿಡುಗಡೆಗೆ ವ್ಯವಸ್ಥೆ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ ?

## ಬಂದೂಕು ಲೈಸನ್ಸ್ ನವೀಕರಿಸುವ ಕುರಿತು

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೨೫ (೨೮೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾರವಾರ ಜಿಲ್ಲೆಯಲ್ಲಿ ಕಳೆದ ೨೦೧೪–೧೫ನೇ ಸಾಲಿನಲ್ಲಿ ಬಂದೂಕು ಪರವಾನಿಗೆ ಹಾಗೂ ನವೀಕರಣ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ; (ತಿಂಗಳವಾರು ವಿವರ ನೀಡುವುದು)

(ಆ) ಇದಕ್ಕೆ ಇರುವ ಮಾನದಂಡವೇನು ;

(ಇ) ಜಿಲ್ಲೆಯಲ್ಲಿ ಬಹಳಷ್ಟು ಅರ್ಜಿಗಳು ಪರವಾನಿಗೆ/ನವೀಕರಣ ಮಾಡಲು ನೀಡಿದ್ದು, ಆದರೆ ಇಲ್ಲಿಯವರೆಗೆ ಅವರಿಗೆ ಯಾವುದೇ ಮಾಹಿತಿ ನೀಡದೇ ಪರವಾನಿಗೆ/ಮಂಜೂರು ನೀಡಿರುವುದಿಲ್ಲವೆಂದು ದೂರುಗಳು ಬಂದಿರುತ್ತದೆ ; ಯಾವ ಕಾರಣಕ್ಕಾಗಿ ಆದೇಶ ನೀಡದೇ ಅರ್ಜಿಗಳನ್ನು ಶಿಲ್ಕು ಇಟ್ಟುಕೊಂಡಿರುತ್ತಾರೆ ; ಇದಕ್ಕೆ ಅವಕಾಶವಿದೆಯೇ ; (ವಿವರ ನೀಡುವುದು)

(ಈ) ಸದರಿ ಬಂದೂಕು ಆತ್ಮ ರಕ್ಷಣೆ ಕುರಿತು ನವೀಕರಣ ಮಾಡುವ ಹಾಗೂ ಬೆಳೆ ರಕ್ಷಣೆ ಕುರಿತು ನವೀಕರಣ ಮಾಡುವ ಅಧಿಕಾರ ಯಾರಿಗಿರುತ್ತದೆ ;

(ಉ) ಕೆಲವೊಂದು ಜಿಲ್ಲೆಯಲ್ಲಿ ತಹಶೀಲ್ದಾರ್ ಮಟ್ಟದಲ್ಲಿಯೇ ಬಂದೂಕು ಪರವಾನಿಗೆ ಹಾಗೂ ನವೀಕರಣ ಮಾಡುತ್ತಿರುವುದರಿಂದ ಕಾರವಾರ ಜಿಲ್ಲೆಯಲ್ಲಿ ಇದಕ್ಕೆ ಸಮಸ್ಯೆ ತಲೆದೋರಲು ಕಾರಣವೇನು ? (ವಿವರ ನೀಡುವುದು)

## ಮುಜರಾಯಿ ದೇವಸ್ಥಾನಗಳ ಜೀರ್ಣೋದ್ಧಾರ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೨೬ (೩೧೬) ಮಾನ್ಯ ಅಬಕಾರಿ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಗೆ ಸೇರಿದ ಎಷ್ಟು ದೇವಾಲಯುಗಳಿವೆ ; ಅವುಗಳ ಅಭಿವೃದ್ಧಿ ಮತ್ತು ಜೀರ್ಣೋದ್ಧಾರಕ್ಕಾಗಿ ಎಷ್ಟು ಹಣವನ್ನು ಪ್ರತಿ ವರ್ಷ ಖರ್ಚು ಮಾಡಲಾಗುತ್ತಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಹಳೆಯ ಹಾಗೂ ಇತಿಹಾಸ ಪ್ರಸಿದ್ಧವಾದ ದೇವಾಲಯಗಳ ಜೀರ್ಣೋದ್ಧಾರ ಕಾರ್ಯವನ್ನು ಎಷ್ಟು ಕಡೆ ಮಾಡಲಾಗಿದೆ ; ಇದಕ್ಕೆ ಎಷ್ಟು ಹಣ ಖರ್ಚು ಮಾಡಲಾಗಿದೆ ; (ಪೂರ್ಣ ವಿವರ ನೀಡುವುದು)

(ಇ) ದೇವಸ್ಥಾನಗಳ ಅರ್ಚಕರಿಗೆ ನೀಡುತ್ತಿರುವ ವೇತನ ತೀರಾ ಕಡಿಮೆ ಇದ್ದು, ಇದನ್ನು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

## ವಿವಿಧ ಇಲಾಖೆಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು.

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೨೭ (೩೧೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಒಟ್ಟು ಎಷ್ಟು ಹುದ್ದೆಗಳು ಖಾಲಿ ಇವೆ, ಅದನ್ನು ತುಂಬಲು ಸರ್ಕಾರ ಕ್ರಮ ಕೈಗೊಳ್ಳಲು ಆಲೋಚಿಸಿದೆಯೇ ; (ಗ್ರೂಪ್ ಎ.ಬಿ.ಸಿ. ವಿವರ ನೀಡುವುದು)

(ಆ) ಹಲವಾರು ವರ್ಷಗಳಿಂದ ಹುದ್ದೆಗಳನ್ನು ಭರ್ತಿ ಮಾಡದಿರುವುದರಿಂದ ಇಲಾಖೆಗಳಲ್ಲಿ ಕೆಲಸ ಕಾರ್ಯಗಳು ಸಮರ್ಪಕವಾಗಿ ಆಗುತ್ತಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದರೆ, ಈ ದಿಸೆಯಲ್ಲಿ ಸರ್ಕಾರ ಕಾರ್ಯ ಪ್ರವೃತ್ತವಾಗುತ್ತದೆಯೇ ;

(ಈ) ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡುವುದು ಸರ್ಕಾರದ ಸಾಮಾಜಿಕ ಹೊಣೆಗಾರಿಕೆಯಲ್ಲವೆ ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ ?

## ಭ್ರಷ್ಟಾಚಾರ ಮುಕ್ತ ಆಡಳಿತ ನಡೆಸುವ ಬಗ್ಗೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೨೮ (೩೧೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಕ್ಷ, ಸ್ವಚ್ಛ ಮತ್ತು ಭ್ರಷ್ಟಾಚಾರ ಮುಕ್ತ ಆಡಳಿತ ನಡೆಸಬೇಕೆಂಬುದು ಸರ್ಕಾರದ ಉದ್ದೇಶವಲ್ಲವೆ ;

(ಆ) ಹಾಗಿದ್ದಲ್ಲಿ, ಲೋಕಾಯುಕ್ತ ದಾಳಿ ನಡೆಸಿರುವ ಭ್ರಷ್ಟ ಅಧಿಕಾರಿಗಳ ಬಗ್ಗೆ ಮುಂದಿನ ತನಿಖೆ ನಡೆಸಲು ಸರ್ಕಾರದ ಮಟ್ಟದಲ್ಲಿ ಒಪ್ಪಿಗೆ ನೀಡುವಲ್ಲಿ ವಿಳಂಬ ಮಾಡುತ್ತಿರುವುದಕ್ಕೆ ಕಾರಣವೇನು ;

(ಇ) ಈ ವಿಚಾರದಲ್ಲಿ ನ್ಯಾಯಾಲಯಗಳಿಂದ ನಿರ್ದೇಶನಗಳೇನಾದರೂ ಬಂದಿವೆಯೇ ; ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಈ) ಲೋಕಾಯುಕ್ತ ಸಂಸ್ಥೆಯನ್ನು ಬಲಪಡಿಸಿ ಸಾರ್ವಜನಿಕರಿಗೆ ಭ್ರಷ್ಟಾಚಾರಮುಕ್ತ ಆಡಳಿತ ದೊರಕುವಂತೆ ಮಾಡಲು ಸರ್ಕಾರ ಕಾರ್ಯಕ್ರಮವನ್ನೇನಾದರೂ ಹಾಕಿಕೊಂಡಿದೆಯೇ ; ಹಾಕಿಕೊಂಡಿದ್ದರೆ, ವಿವರ ನೀಡುವುದು ?

## ಬೀದರ್ ನಗರವನ್ನು ಅಭಿವೃದ್ಧಿಪಡಿಸುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೨೨೯ (೩೨೦) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಆರ್ಥಿಕ ಮುಗ್ಗಟ್ಟಿನಿಂದ ಅಭಿವೃದ್ಧಿ ಕಾಣದ ಬೀದರ್ ನಗರವನ್ನು ಅಭಿವೃದ್ಧಿಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳಾವುವು ;

(ಆ) ಈ ನಗರವನ್ನು ಅಭಿವೃದ್ಧಿಪಡಿಸಲು ಸರ್ಕಾರ ಹೆಚ್ಚಿನ ಆರ್ಥಿಕ ನೆರವನ್ನು ನೀಡಲು ಯಾವ ಯಾವ ಕ್ರಮ ಕೈಗೊಂಡಿರುತ್ತದೆ ;

(ಇ) ಕೇಂದ್ರ ಸರ್ಕಾರದ ನೆರವನ್ನು ಪಡೆಯಲು ಸರ್ಕಾರವು ಕೈಗೊಂಡಿರುವ ಕ್ರಮವೇನು ;

(ಈ) ಕೇಂದ್ರ ಸರ್ಕಾರವು ಜಾರಿಗೆ ತರಲು ಉದ್ದೇಶಿಸಿರುವ ಸ್ಮಾರ್ಟ್ ಸಿಟಿ ಯೋಜನೆಯ ಅಡಿಯಲ್ಲಿ ಬೀದರನ್ನು ಸೇರಿಸಲು ರಾಜ್ಯ ಸರ್ಕಾರವು ಕೈಗೊಂಡಿರುವ ಕ್ರಮವೇನು ?

## ಬೀದರಿನ ಡಿಪ್ಲೋಮ ಪಾಲಿಟೆಕ್ನಿಕ್ ಕಾಲೇಜಿನ ಅಭಿವೃದ್ಧಿ ಕುರಿತು

**ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೨೩೦ (೩೨೯) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ನಗರದಲ್ಲಿ ಹೊಸದಾಗಿ (Diploma, Polytechnic) ಸರ್ಕಾರಿ ಕಾಲೇಜು ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ಸರ್ಕಾರಿ ಕಾಲೇಜಿನಲ್ಲಿ ವಿವಿಧ ಮೂಲಭೂತ ಸೌಲಭ್ಯದ ಕೊರತೆಯಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಆಗುತ್ತಿರುವುದು ನಿಜವೇ ;

(ಇ) ಈ ಕಾಲೇಜಿನ ಕೊಠಡಿಗಳು/ ವಿದ್ಯಾರ್ಥಿ ಹಾಸ್ಟೆಲ್ ಕಾಲೇಜಿಗೆ ಹೋಗಲು ರಸ್ತೆ/ಕಾಂಪೌಂಡ್ ಹಾಗೆ ಸುತ್ತಮುತ್ತ ಸ್ವಚ್ಛತೆ ಇತರೆ ಸೌಲಭ್ಯಗಳ ಕೊರತೆಗಳಿಂದ ವಿದ್ಯಾರ್ಥಿಗಳು ದಿನ ನಿತ್ಯ ಪರದಾಡುವ ಪರಿಸ್ಥಿತಿ ಎದುರಿಸುತ್ತಿರುವ ಬಗ್ಗೆ ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳುವುದೇ ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಹಾಗೇ ಈ ಕಾಲೇಜಿನ ಸಮಸ್ಯೆಗಳ ನಿವಾರಣೆಗೆ ತಗಲುವ ವೆಚ್ಚ ಎಷ್ಟು ; (ಮಾಹಿತಿ ಒದಗಿಸುವುದು)

## ಬೀದರ್ ಜಿಲ್ಲೆಯಲ್ಲಿ ಕಾನೂನು ಬಾಹಿರವಾಗಿ ಮದ್ಯ ಮಾರಾಟದ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೨೩೧ (೩೧೯) ಮಾನ್ಯ ಅಬಕಾರಿ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯ ಹಳ್ಳಿಗಳಲ್ಲಿ ಕಾನೂನು ಬಾಹಿರವಾಗಿ ಸಾರಾಯಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಬೀದರ್ ಜಿಲ್ಲೆಯ ಎಲ್ಲಾ ಗಡಿಭಾಗದಲ್ಲಿ ವಿವಿಧ ನಕಲಿ ಮಧ್ಯ ತಯಾರಿಸಿ ಹಳ್ಳಿಗಳಲ್ಲಿ ರಾಜರೋಷವಾಗಿ ಸಾರಾಯಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಕಳೆದ ೩ ವರ್ಷಗಳಲ್ಲಿ ನಕಲಿ ಸಾರಾಯಿ ತಯಾರಿಸಿ ಸಿಕ್ಕಿ ಬಿದ್ದ ಪ್ರಕರಣಗಳೆಷ್ಟು ; (ವರ್ಷವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಬೀದರ್ ಜಿಲ್ಲೆಯಲ್ಲಿ ಸಿಕ್ಕಲ್ಲಿ ಸಾರಾಯಿ ಮಾರಾಟ ಮಾಡುವವರ ಬಗ್ಗೆ ದೂರು ಕೊಟ್ಟರೂ ಅಧಿಕಾರಿಗಳು ಯಾವುದೇ ರೀತಿಯ ಕ್ರಮ ಕೈಗೊಳ್ಳದೆ ಇರುವುದಕ್ಕೆ ಕಾರಣಗಳೇನು ; ಇಂತಹ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ ? (ಸಂಪೂರ್ಣ ವಿವರ ಒದಗಿಸುವುದು)

# I.T.I/DIPLOMA-POLYTECHNIC ಕಾಲೇಜುಗಳಿಗೆ ವೇತನಾನುದಾನ ನೀಡುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೨೩೨ (೩೩೧) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ನಡೆಯುತ್ತಿರುವ ಸರ್ಕಾರಿ ಅನುದಾನಿತ, ಅನುದಾನ ರಹಿತ, I.T.I/DIPLOMA-POLYTECHNIC ಕಾಲೇಜುಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಸದರಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ, ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು ; (ವರ್ಗವಾರು ವಿವರ ನೀಡುವುದು)

(ಇ) ಯಾವ ಸಾಲಿನವರೆಗೆ ಪ್ರಾರಂಭವಾಗಿರುವ ಎಷ್ಟು ಕಾಲೇಜುಗಳಿಗೆ ವೇತನಾನುದಾನ ನೀಡಲಾಗುತ್ತದೆ ; ಇದಕ್ಕೆ ನಿಗಧಿಪಡಿಸಿರುವ ಮೊತ್ತವೆಷ್ಟು ;

(ಈ) ಇದುವರೆಗೆ ಎಷ್ಟು ಕಾಲೇಜುಗಳಿಗೆ ವೇತನಾನುದಾನ ನೀಡಲಾಗಿದೆ; (ಜಿಲ್ಲಾ, ತಾಲ್ಲೂಕುವಾರು, ಸಿಬ್ಬಂದಿಗಳವಾರು ಸ್ಪಷ್ಟ ಮಾಹಿತಿ ನೀಡುವುದು)

(ಉ) ಇನ್ನುಳಿದ ಕಾಲೇಜುಗಳ ಸಂಖ್ಯೆ ಎಷ್ಟು ; ಉಳಿದ ಕಾಲೇಜುಗಳಿಗೆ ಯಾವ ಕಾಲಮಿತಿಯಲ್ಲಿ ವೇತನಾನುದಾನ ನೀಡಲಾಗುತ್ತದೆ ? (ವಿವರ ನೀಡುವುದು)

## ದಿನಗೂಲಿ ನೌಕರರನ್ನು ಖಾಯಂ ಮಾಡುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು):–**

೨೩೩ (೩೨೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಿನಗೂಲಿ ನೌಕರರನ್ನು ಖಾಯಂ ಮಾಡಲು ಸರ್ಕಾರ ಅನುಸರಿಸುತ್ತಿರುವ ಮಾನದಂಡವೇನು ;

(ಆ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ದಿನಗೂಲಿ ನೌಕರರು ಖಾಯಂ ಮಾಡುವ ಬಗ್ಗೆ ಹೋರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಮಾನದಂಡದ ಪ್ರಕಾರ ಖಾಯಂ ಮಾಡಿ ಆ ನೌಕರರಿಗೆ ನ್ಯಾಯ ಕೊಡಲು ಇರುವ ತೊಂದರೆಗಳೇನು ;

(ಈ) ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ ?

## ರಾಜ್ಯ ಗುಪ್ತದಳದ ಕಾರ್ಯ ವೈಖರಿ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು):–**

೨೩೪ (೩೨೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಗುಪ್ತದಳ ಕೆಲಸ ನಿರ್ವಹಿಸುವಲ್ಲಿ ಅನುಸರಿಸುತ್ತಿರುವ ಮಾನದಂಡಗಳೇನು ;

(ಆ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಎಲ್ಲೆಲ್ಲಿ ಕೆಲಸ ನಿರ್ವಹಿಸುತ್ತಿದೆ;

(ಇ) ಕಳೆದ ಎರಡು ವರ್ಷಗಳಿಂದ ಗುಪ್ತದಳದ ಮಾಹಿತಿ ಸರಿಯಾಗಿ ಬಾರದಿರುವ ಕಾರಣ ಸರ್ಕಾರಕ್ಕೆ ತೊಂದರೆಯಾಗುತ್ತಿರುವುದು ನಿಜವೇ :

(ಈ) ಸಮರ್ಪಕವಾಗಿ ನಿರ್ವಹಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಾಕೀತು ಮಾಡಲಾಗುವುದೇ ;

(ಉ) ಸಿಬ್ಬಂದಿ ಕೊರತೆಯಿಂದ ಸಮಸ್ಯೆಯಾಗಿದ್ದಲ್ಲಿ ಕೂಡಲೇ ಸರಿಪಡಿಸಲಾಗುವುದೇ ?

## ದೇವಸ್ಥಾನಗಳಿಗೆ ಹೆಚ್ಚು ಅನುದಾನ ಒದಗಿಸುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು):–**

೨೩೫ (೩೨೭) ಮಾನ್ಯ ಅಬಕಾರಿ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಎರಡು ವರ್ಷದಲ್ಲಿ ರಾಜ್ಯದಲ್ಲಿರುವ ಮುಜರಾಯಿ ದೇವಸ್ಥಾನಗಳಿಗೆ ಅನುದಾನಕ್ಕಾಗಿ ಬಂದಿರುವ ಬೇಡಿಕೆ ಎಷ್ಟು ;

(ಆ) ಎರಡು ವರ್ಷದ ಆಯವ್ಯಯದಲ್ಲಿ ಮುಜರಾಯಿ ಇಲಾಖೆಗೆ ಹಂಚಿಕೆಯಾಗಿರುವ ಹಣವೆಷ್ಟು ; ಬಿಡುಗಡೆಯಾಗಿರುವ ಹಣವೆಷ್ಟು;

(ಇ) ಬೇಡಿಕೆಗೆ ತಕ್ಕಂತೆ ಸರ್ಕಾರಕ್ಕೆ ಮನವಿ ಮಾಡಿ ಹೆಚ್ಚಿನ ಅನುದಾನ ಪಡೆಯಲು ಇಲಾಖೆಯ ಕ್ರಮಗಳೇನು ;

(ಈ) ದೇವಸ್ಥಾನಗಳಿಗಿರುವ ಅನುದಾನಕ್ಕಾಗಿ ಬಂದಿರುವ ಬೇಡಿಕೆಗಳನ್ನು ಪರಿಗಣಿಸಿ ಎಷ್ಟು ವರ್ಷದಲ್ಲಿ ಅನುದಾನ ನೀಡಲಾಗುವುದು ?

## ತುಮಕೂರು ಜಿಲ್ಲೆಯಲ್ಲಿ ಪೊಲೀಸ್ ವ್ಯವಸ್ಥೆ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು):–**

೨೩೬ (೩೨೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುಮಕೂರು ಜಿಲ್ಲೆಯಲ್ಲಿನ ಪೊಲೀಸ್ ಠಾಣೆಗಳ ವ್ಯವಸ್ಥೆ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕೆಲವು ತಾಲ್ಲೂಕುಗಳ ಠಾಣೆಗಳಲ್ಲಿ ವಾಹನಗಳಿಲ್ಲದೆ ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕೆಲವು ಠಾಣೆಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲದಿರುವುದು ಸರ್ಕಾರ ಗಮನಿಸಿದೆಯೇ ;

(ಈ) ಅನೇಕ ಠಾಣೆಗಳಲ್ಲಿ ಪೇದೆಗಳು, ನೌಕರರು ಹಾಗೂ ಮಹಿಳಾ ಪೇದೆಗಳಿಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಇಲಾಖೆ ಗಮನಿಸಿದೆಯೇ ;

(ಉ) ಈ ಎಲ್ಲಾ ಸೌಕರ್ಯಗಳ ಬಗ್ಗೆ ಕೂಡಲೇ ಗಮನ ಹರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುವುದೇ ?

## ಕಾನೂನು ಕಾಲೇಜುಗಳಿಗೆ ಅನುದಾನ ಕೊಡುವ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–**

೨೩೭ (೩೪೩) ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾನೂನು ಕಾಲೇಜುಗಳಿಗೆ ಅನುದಾನ ಕೊಡುವ ಸರ್ಕಾರದ ಚಿಂತನೆ ಹಾಗೂ ಪ್ರಕ್ರಿಯೆ ಏನು;

(ಆ) ವಿಜಯಪುರ ಬಾಗಲಕೋಟೆ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಪ್ರಸ್ತಾವಿತ ಅನುದಾನಕ್ಕೆ ಒಳಪಡಲಿರುವ ಕಾಲೇಜುಗಳು ಯಾವುವು; ಕಾಲೇಜಿನ ಸಿಬ್ಬಂದಿಯ ಹೆಸರು ಹಾಗೂ ಅವರು ಬೋಧಿಸುತ್ತಿರುವ ವಿಷಯಗಳನ್ನೊಳಗೊಂಡಂತೆ ವಿವರಗಳನ್ನು ನೀಡುವುದು?

## ಯು.ಜಿ.ಸಿ. ಹಾಗೂ ಎ.ಐ.ಸಿ.ಟಿ.ಇ. ಬಾಕಿ ವೇತನ ಶ್ರೇಣಿ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–**

೨೩೮ (೩೩೫) ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಈ ಹಿಂದೆ ಯು.ಜಿಸಿ. ಹಾಗೂ ಎ.ಐ.ಸಿ.ಟಿ.ಇ. ವೇತನ ಶ್ರೇಣಿಯನ್ನು ಯಾವ ದಿನಾಂಕದಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ;

(ಆ) ಸರ್ಕಾರಿ ಹಾಗೂ ಅನುದಾನಿತ ಶಿಕ್ಷಕರಿಗೆ ಯು.ಜಿ.ಸಿ. ಹಾಗೂ ಎ.ಐ.ಸಿ.ಟಿ.ಇ. ಕೊಡಬೇಕಾದ ವೇತನ ಹಿಂಬಾಕಿ ಹಣ ಎಷ್ಟು;

(ಇ) ವಿಜಯಪುರ ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಯ ಯಾವ ಯಾವ ಕಾಲೇಜಿನ ಯಾವ ಯಾವ ಉಪನ್ಯಾಸಕರ, ಪ್ರಾಧ್ಯಾಪಕರ ಪ್ರಾಚಾರ್ಯರಿಗೆ ಕೊಡಬೇಕಾಗಿರುವ ಯು.ಜಿ.ಸಿ. ಹಾಗೂ ಎ.ಐ.ಸಿ.ಟಿ.ಎ. ವೇತನ ಹಿಂಬಾಕಿ ಎಷ್ಟು? (ಪ್ರತಿಯೊಬ್ಬರ ವಿವರ ನೀಡುವುದು)

## ಅತಿಥಿ ಉಪನ್ಯಾಸಕರ ಬೇಡಿಕೆಗಳ ಹಾಗೂ ಸೇವಾ ಭದ್ರತೆಗಳ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) ಮತ್ತು ಶ್ರೀಮತಿ ತಾರಾ ಅನೂರಾಧ (ನಾಮನಿರ್ದೇಶನ ಹೊಂದಿದವರು):–**

೨೪೦ (೩೩೪+೩೩೭)) ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಇರುವ ಒಟ್ಟು ಬೋಧಕ ಸಿಬ್ಬಂದಿಯ ಸಂಖ್ಯೆ ಎಷ್ಟು; ಅದರಲ್ಲಿ ಅತಿಥಿ ಉಪನ್ಯಾಸಕರ ಸಂಖ್ಯೆ ಎಷ್ಟು;

(ಆ) ಎಷ್ಟು ವರ್ಷಗಳ ಹಿಂದೆ ಅತಿಥಿ ಉಪನ್ಯಾಸಕರ ನೇಮಕಾತಿ ಆರಂಭಿಸಲಾಗಿದೆ; ಇವರಿಗೆ ಕೊಡಲಾಗುತ್ತಿರುವ ಸಂಭಾವನೆ ಎಷ್ಟು;

(ಇ) ಯು.ಜಿ.ಸಿ. ನಿಯಮಾವಳಿಗಳ ಪ್ರಕಾರ ಕೊಡಬೇಕಾಗಿರುವ ಸಂಭಾವನೆ ಎಷ್ಟು; ಮಹಿಳಾ ಅತಿಥಿ ಉಪನ್ಯಾಸಕರಿಗೆ ಕೊಡಲಾಗುತ್ತಿರುವ ಸೌಲಭ್ಯಗಳು ಯಾವುವು; (ಬೇರೆ ಸರ್ಕಾರಿ ಮಹಿಳಾ ನೌಕರರಿಗೆ ಕೊಡಲಾಗುತ್ತಿರುವ ಸೌಲಭ್ಯಗಳೊಂದಿಗೆ ಹೋಲಿಕೆ ಮಾಡಿ. ಹೆರಿಗೆ ರಜೆ ಹಾಗೂ ಇತ್ಯಾದಿಗಳ (ವಿವರ ನೀಡುವುದು)

(ಈ) ಇವರಿಗೆ ಸೇವಾ ಭದ್ರತೆ ಒದಗಿಸುವ ಕುರಿತು ಸರ್ಕಾರದ ಕ್ರಮವೇನು?

## ಪದವಿ ಕಾಲೇಜುಗಳಿಗೆ ಅನುದಾನ ನೀಡುವ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–**

೨೪೧ (೩೩೩) ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೧೯೯೫ರವರೆಗೆ ಆರಂಭಿಸಲಾಗಿರುವ ಪದವಿ ಕಾಲೇಜುಗಳಿಗೆ ಅನುದಾನ ನೀಡುವ ಕುರಿತು ಸರ್ಕಾರ ಚಿಂತನೆ ಹಾಗೂ ಪ್ರಕ್ರಿಯೆ ಏನು;

(ಆ) ರಾಜ್ಯದಲ್ಲಿರುವ ಅನುದಾನಿತ ಪದವಿ ಕಾಲೇಜುಗಳಲ್ಲಿ ೧೯೯೫ರ ಮೊದಲು ಆರಂಭಿಸಿರುವ ಹೊಸ ವಿಷಯ ಸಂಯೋಜನೆಗಳಿಗೆ ಅನುದಾನ ಕೊಡುವ ಕುರಿತು ಸರ್ಕಾರದ ಕ್ರಮ ಹಾಗೂ ಚಿಂತನೆ ಏನು;

(ಇ) ಅನುದಾನಿತ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ/ ಬೋಧಕೇತರ ಹುದ್ದೆಗಳನ್ನು ತುಂಬಲು ಸರ್ಕಾರದ ಕ್ರಮ ಹಾಗೂ ಚಿಂತನೆ ಏನು?

## ಬೆಳಗಾವಿ, ಮೈಸೂರು ಹಾಗೂ ಬೆಂಗಳೂರು ವಿಭಾಗಗಳಲ್ಲಿ ೩೭೧(ಜೆ) ಶೇ.೮/ಮೀಸಲಾತಿ ಬಗ್ಗೆ

**ಶ್ರೀ ಅಮರನಾಥ ಪಾಟೀಲ (ಪದವೀಧರರ ಕ್ಷೇತ್ರ):–**

೨೪೨ (೩೪೦) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಬೆಳಗಾವಿ ಮೈಸೂರು ಹಾಗೂ ಬೆಂಗಳೂರು ವಿಭಾಗದಲ್ಲಿ ಸಂವಿಧಾನ ೩೭೧(ಜೆ) ಅಡಿಯಲ್ಲಿ ಶೇ. ೮/ ಮೀಸಲಾಗಿ ಪ್ರಕಾರ ಆದ ನೇಮಕಾತಿಗಳು ಎಷ್ಟು ಹಾಗೂ ವಿವಿಧ ಇಲಾಖೆಗಳಲ್ಲಿ ಆದ ಬಡ್ತಿಗಳು ಎಷ್ಟು; (ಇಲಾಖಾವಾರು, ವಿಭಾಗವಾರು ವಿವರ ನೀಡುವುದು)

(ಆ) ಸಂವಿಧಾನದ ಆಶಯದ ಪ್ರಕಾರ ೩೭೧(ಜೆ) ಅಡಿಯಲ್ಲಿ ಶೇ ೮/ ಮೀಸಲಾತಿಯನ್ನು ನೇಮಕಾತಿ ಹಾಗೂ ಬಡ್ತಿಗಳಲ್ಲಿ ಅನುಷ್ಠಾನಗೊಳ್ಳದೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದ್ದರೆ ಶೇ. ೮/ ಮೀಸಲಾತಿಯನ್ನು ಅನುಷ್ಠಾನಗೊಳಿಸಲು ಸರ್ಕಾರಕ್ಕೆ ಇರುವ ಅಡಚಣೆಗಳೇನು;

(ಇ) ಈ ಸಮಸ್ಯೆಗಳನ್ನು ಬಗೆಹರಿಸುವಂತಹ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮವೇನು;

(ಈ) ಸಂವಿಧಾನದ ಆಶಯದ ಪ್ರಕಾರ ೩೭೧(ಜೆ) ನಿಯಮಗಳಂತೆ ರಾಜ್ಯದ ಇತರೆ ವಿಭಾಗದ ಎಲ್ಲಾ ಇಲಾಖೆಗಳಲ್ಲಿ ಶೇ. ೮/ ರಷ್ಟು ಮೀಸಲಾತಿ ಕಲ್ಪಿಸಲು ಸರ್ಕಾರ ಮುಂದಾಗುವುದೇ?

## ಸಚಿವ ಸಂಪುಟ ಸಭೆಗಳಲ್ಲಿ ಕೈಗೊಂಡ ನಿರ್ಣಯಗಳ ಅನುಷ್ಠಾನದ ಬಗ್ಗೆ

**ಶ್ರೀ ಅಮರನಾಥ ಪಾಟೀಲ (ಪದವೀಧರರ ಕ್ಷೇತ್ರ):–**

(೩೪೧) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೨೦೦೮ ರಿಂದ ಕಲಬುರಗಿಯಲ್ಲಿ ಜರುಗಿದ ಸಚಿವ ಸಂಪುಟ ಸಭೆಗಳು ಎಷ್ಟು; (ವಿವರ ನೀಡುವುದು)

(ಆ) ಸದರಿ ಸಚಿವ ಸಂಪುಟ ಸಭೆಗಳಲ್ಲಿ ಕೈಗೊಂಡ ನಿರ್ಣಯಗಳು ಯಾವುವು; ( ಪ್ರತ್ಯೇಕವಾಗಿ ವಿವರ ನೀಡುವುದು)

(ಇ) ಸದರಿ ನಿರ್ಣಯಗಳು ಅನುಷ್ಠಾನಗೊಂಡಿವೆಯೇ; ಇದ್ದರೆ, ಅನುಪಾಲನಾ ವರದಿಯನ್ನು ಪ್ರತ್ಯೇಕವಾಗಿ ನೀಡುವುದು;

(ಈ) ಅನುಷ್ಠಾನಗೊಳ್ಳದ ನಿರ್ಣಯಗಳು ಯಾವುವು ಅವುಗಳನ್ನು ಅನುಷ್ಠಾನಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು? (ಮಾಹಿತಿ ನೀಡುವುದು)

## ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ

**ಶ್ರೀ ಅಮರನಾಥ ಪಾಟೀಲ (ಪದವೀಧರರ ಕ್ಷೇತ್ರ):–**

೨೪೩ (೩೪೨) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದರಾಬಾದ್–ಕರ್ನಾಟಕ ಪ್ರದೇಶದ ೦೬ ಜಿಲ್ಲೆಗಳಲ್ಲಿರುವ ಒಟ್ಟು ಹುದ್ದೆಗಳು ಎಷ್ಟು; ಮಂಜೂರಾದ, ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ಇಲಾಖಾವಾರು, ವೃಂದವಾರು ಮಾಹಿತಿ ನೀಡುವುದು)

(ಆ) ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ನೇರ ನೇಮಕಾತಿ ಹಾಗೂ ಮುಂಬಡ್ತಿಗಾಗಿ ಮೀಸಲಿಟ್ಟ ಹುದ್ದೆಗಳು ಎಷ್ಟು; (ಇಲಾಖಾವಾರು, ಹುದ್ದೆವಾರು ಮಾಹಿತಿ ನೀಡುವುದು)

(ಇ) ಸಂವಿಧಾನದ ಕಲಂ ೩೭೧ (ಜೆ) ಅಡಿಯಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ನೇರ ನೇಮಕಾತಿಗಾಗಿ ಮತ್ತು ಮುಂಬಡ್ತಿಗಾಗಿ ಮೀಸಲಿಟ್ಟ ಹುದ್ದೆಗಳು ಎಷ್ಟು; (ಇಲಾಖಾವಾರು ಹುದ್ದೆವಾರು ಮಾಹಿತಿ ನೀಡುವುದು)

(ಈ) ನೇರ ನೇಮಕಾತಿ ಪ್ರಕ್ರಿಯೆ ವಿಳಂಬವಾಗುತ್ತಿದ್ದು, ಹಲವಾರು ಅರ್ಹ ಅಭ್ಯರ್ಥಿಗಳು ವಯೋಮಿತಿ ಮೀರುವ ಅಂಚಿನಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅಭ್ಯರ್ಥಿಗಳಿಗೆ ವಯೋಮಿತಿ ಸಡಿಲಿಕೆ ನೀಡಲು ಸರ್ಕಾರ ಮುಂದಾಗುವುದೇ? (ಮಾಹಿತಿ ನೀಡುವುದು)

## ಕಲಬುರಗಿಯಲ್ಲಿ ಕೆ.ಎ.ಟಿ. ಪೀಠ ಹಾಗೂ ಇತರೆ ಪೀಠಗಳ ಸ್ಥಾಪನೆ ಬಗ್ಗೆ

**ಶ್ರೀ ಅಮರನಾಥ ಪಾಟೀಲ (ಪದವೀಧರರ ಕ್ಷೇತ್ರ):–**

೨೪೪ (೩೩೯) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿಯಲ್ಲಿ ಕೆ.ಎ.ಟಿ. ಹಾಗೂ ಇತರೆ ಪೀಠಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆಯೇ; ಮಂಜೂರಾಗಿದ್ದರೆ, ಯಾವಾಗ; (ಮಾಹಿತಿ ನೀಡುವುದು)

(ಆ) ಸದರಿ ಪೀಠಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಪ್ರಾರಂಭಿಸಲಾಗಿದೆಯೇ; (ವಿವರ ನೀಡುವುದು)

(ಇ) ಸದರಿ ಪೀಠಗಳು ಪ್ರಾರಂಭವಾಗದೆ ಇದ್ದರೆ, ಯಾವ ಕಾಲಮಿತಿಯೊಳಗೆ ಸ್ಥಾಪಿಸಿ ಕಾರ್ಯ ಚಟುವಟಿಕೆಗಳನ್ನು ಪ್ರಾರಂಭಿಸಲಾಗುವುದು; ಈ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಕ್ರಮಗಳೇನು?

## ರಾಜ್ಯದಲ್ಲಿ ಅತಿಥಿ ಉಪನ್ಯಾಸಕರ ಸೇವೆಯನ್ನು ಖಾಯಂಗೊಳಿಸುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ (ಪದವೀಧರರ ಕ್ಷೇತ್ರ):–**

೨೪೫ (೩೩೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅತಿಥಿ ಉಪನ್ಯಾಸಕರ ಸೇವೆಯನ್ನು ಖಾಯಂಗೊಳಿಸುವಂತೆ ಹಲವಾರು ದಿನಗಳಿಂದ ನಡೆಸುತ್ತಿರುವ ಹೋರಾಟವು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅತಿಥಿ ಉಪನ್ಯಾಸಕರ ಸೇವೆ ಖಾಯಂಗೊಳಿಸಲು ಸರ್ಕಾರವು ಕೈಗೊಳ್ಳುವ ಕ್ರಮವೇನು; (ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸಂಖ್ಯೆ ಎಷ್ಟು; ಪ್ರತಿ ತಿಂಗಳು ಪಡೆಯುವ ವೇತನ ಹಾಗೂ ಇತರೆ ಸೌಲಭ್ಯಗಳು ಯಾವುವು? (ಜಿಲ್ಲಾವಾರು ಕಾಲೇಜುವಾರು ಸಂಪೂರ್ಣ ಮಾಹಿತಿ ನೀಡುವುದು)

## ಪದವಿ ಕಾಲೇಜುಗಳ ಉಪನ್ಯಾಸಕರ ಯು.ಜಿ.ಸಿ. ಬಾಕಿ ವೇತನ ಬಿಡುಗಡೆ ಕುರಿತು

**ಶ್ರೀ ಎಸ್.ವಿ. ಸಂಕನೂರ (ಪದವೀಧರರ ಕ್ಷೇತ್ರ):–**

೨೪೬ (೩೪೪) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಉಪನ್ಯಾಸಕರಿಗೆ ದಿನಾಂಕ: ೦೧-೦೧-೨೦೦೬ ರಿಂದ ೨೪-೧೨-೨೦೦೯ರವರೆಗೆ ನೀಡಬೇಕಾದ ಯು.ಜಿ.ಸಿ. ಬಾಕಿ ವೇತನ ನೀಡಲಾಗಿದೆಯೇ;

(ಆ) ನೀಡದಿದ್ದಲ್ಲಿ, ಈ ಬಾಕಿ ವೇತನವನ್ನು ನೀಡಲು ವಿಳಂಬಕ್ಕೆ ಕಾರಣಗಳೇನು; (ವಿವರ ಒದಗಿಸುವುದು)

(ಇ) ಪದವಿ ಕಾಲೇಜುಗಳಲ್ಲಿ ಸೇವಾ ನಿರತ ಉಪನ್ಯಾಸಕರುಗಳು ಯು.ಜಿ.ಸಿ. ಬಾಕಿ ವೇತನ ಪಾವತಿಗಾಗಿ ಉಚ್ಚ ನ್ಯಾಯಾಲಯಕ್ಕೆ ಮೊರೆ ಹೋಗಿದ್ದಾರೆಯೇ; ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮ ಏನು;

(ಈ) ಬಾಕಿ ವೇತನ ಬಿಡುಗಡೆಗಾಗಿ ಸರ್ಕಾರ ಏನು ನಿರ್ಧಾರ ಕೈಗೊಂಡಿದೆ?

## ಬೆಂಗಳೂರು ಮಹಾನಗರವನ್ನು "ಅತಿ ಸ್ವಚ್ಛ ನಗರ" ವನ್ನಾಗಿ ಪರಿವರ್ತಿಸುವ ಬಗ್ಗೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೪೭ (೩೪೬) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಸ ಸಂಗ್ರಹಣೆ, ಕಸ ವಿಂಗಡಣೆ, ಸಾಗಣೆ ಮತ್ತು ತ್ಯಾಜ್ಯ ನಿರ್ವಹಣೆಯಲ್ಲಿನ ವೈಫಲ್ಯದಿಂದಾಗಿ ಮತ್ತು ಶೌಚಾಲಯಗಳ ಕೊರತೆಯಿಂದಾಗಿ ಸುಂದರವಾದ ಬೆಂಗಳೂರು ಮಹಾನಗರವು ಅತ್ಯಂತ ಗಲೀಜು ನಗರವಾಗಿದ್ದು, ರೋಗ ರುಜಿನಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಬೆಂಗಳೂರು ಮಹಾನಗರವನ್ನು “ಅತಿ ಸ್ವಚ್ಛ ನಗರ” ವರ್ನ್ನಾಗಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು;

(ಇ) ಬೆಂಗಳೂರು ಮಹಾನಗರ ಪಾಲಿಕೆಯ ಪ್ರತಿಯೊಂದು ವಾರ್ಡ್‌ನಲ್ಲಿ ಘನತ್ಯಾಜ್ಯದಿಂದ ವಿದ್ಯುತ್ ತಯಾರಿಸುವ ಘಟಕವನ್ನು ಸ್ಥಾಪಿಸಲಾಗುವುದೇ;

(ಈ) ನಗರದಲ್ಲಿನ ಪ್ರತಿಯೊಂದು ಉದ್ಯಾನವನದಲ್ಲಿನ ತ್ಯಾಜ್ಯದಿಂದ ಅಲ್ಲಿಯೇ ಸಾವಯವ ಗೊಬ್ಬರವನ್ನು ತಯಾರಿಸಲು ಕ್ರಮ ಕೈಗೊಳ್ಳಲಾಗುವುದೇ?

## ಹುಬ್ಬಳ್ಳಿ–ಧಾರವಾಡ ಮಹಾನಗರಗಳಲ್ಲಿ ಸ್ವಚ್ಛತಾ ಅಂದೋಲನ ಹಮ್ಮಿಕೊಳ್ಳುವ ಬಗ್ಗೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೪೮ (೩೪೫) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹಣೆ, ವಿಂಗಡಣೆ, ಸಾಗಣೆ ಮತ್ತು ನಿರ್ವಹಣೆಯಲ್ಲಿನ ವೈಫಲ್ಯದಿಂದಾಗಿ ಅವಳಿ ನಗರಗಳಲ್ಲಿ ಹೆಚ್ಚಿನ ಮಾಲಿನ್ಯ ಉಂಟಾಗುತ್ತಿದ್ದು ರೋಗ ರುಜಿನಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಹುಬ್ಬಳ್ಳಿ–ಧಾರವಾಡ ಅವಳಿ ನಗರಗಳಲ್ಲಿ ಸ್ವಚ್ಛತೆಯನ್ನು ಕಾಪಾಡಲು, ರೋಗ ರುಜಿನಗಳನ್ನು ತಡೆಗಟ್ಟಲು ಸರ್ಕಾರವು ತೀವ್ರ ಕ್ರಮಗಳನ್ನು ಕೈಗೊಳ್ಳುವುದೇ;

(ಇ) ನಗರ ನೀತಿಗಳ ಕಟ್ಟುನಿಟ್ಟಿನ ಅನುಷ್ಠಾನ ಮಾಡುವುದಲ್ಲದೇ ಸಾರ್ವಜನಿಕ ಸ್ಥಳಗಳನ್ನೂ ಸಹ ಸ್ವಂತ ಸ್ಥಳಗಳಂತೆ ಪರಿಭಾವಿಸಿ ನಿರ್ಮಲ ವಾತಾವರಣ ರೂಪಿಸುವಲ್ಲಿ ಸಾರ್ವಜನಿಕರನ್ನು ಮತ್ತು ಸರ್ಕಾರೇತರ ಸಂಘ–ಸಂಸ್ಥೆಗಳನ್ನು ಪಾಲ್ಗೊಳ್ಳುವಂತೆ ಮಾಡಿ "ಸ್ವಚ್ಛತಾ ಅಂದೋಲನ" ವನ್ನು ಹಮ್ಮಿಕೊಳ್ಳಲಾಗುವುದೇ;

(ಈ) ಅವಳಿ ನಗರಗಳಲ್ಲಿ ಹೆಚ್ಚಿನ "ಇ–ಶೌಚಾಲಯ (ಇ–ಟಾಯ್ಲೆಟ್)" ಗಳನ್ನು ಸ್ಥಾಪಿಸುವ ಮೂಲಕ ಸಂಪೂರ್ಣ ಬಯಲು ಶೌಚಾಲಯ ಮುಕ್ತ ನಗರಗಳನ್ನಾಗಿ ಪರಿವರ್ತಿಸಲು ತೀವ್ರ ಕ್ರಮಗಳನ್ನು ಕೈಗೊಳ್ಳಲಾಗುವುದೇ?

## ಗ್ರಾಮೀಣಾ ಪ್ರದೇಶದ ಸ್ಪಷ್ಟೀಕರಣ ದಾಖಲೆ ನೀಡುವ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೨೪೯ (ಇ೪೯) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಪ್ರವೇಶ ನೀಡುವಾಗ ಹಾಗೂ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ೨೦೧೫–೧೬ನೇ ಸಾಲಿನಲ್ಲಿ ಪ್ರಕಟಿಸಿರುವ ಕೈಪಿಡಿಯಲ್ಲಿ ಗ್ರಾಮೀಣಾ ಪ್ರದೇಶಗಳನ್ನು ನಿಗಧಿಪಡಿಸಿ ಪ್ರಕಟಿಸಲಾಗಿದೆಯೇ;

(ಆ) ಹಾಗಿದ್ದಲ್ಲಿ, ಗ್ರಾಮೀಣ ಪ್ರದೇಶಗಳೆಂದು ಪ್ರಕಟಿಸಿದ ಪ್ರದೇಶಗಳ ಬಗ್ಗೆ ಸ್ಪಷ್ಟೀಕರಣ ನೀಡಿದ ಸಕ್ಷಮ ಪ್ರಾಧಿಕಾರ ಯಾವುದು; (ದಾಖಲೆಗಳೊಂದಿಗೆ ಮಾಹಿತಿ ನೀಡುವುದು)

(ಇ) ಈ ಮಾಹಿತಿಯು ಕರಾರುವಕ್ಕಾಗಿ ಹಾಗೂ ಕಾನೂನಿನನ್ವಯ ಸರಿ ಇದೆಯೇ;

(ಈ) ಈ ಕುರಿತು ನಗರಾಭಿವೃದ್ಧಿ ಇಲಾಖೆಯಿಂದ ನಿಖರವಾದ ಮಾಹಿತಿ ಪಡೆಯಲಾಗಿದೆಯೇ; ಹಾಗಿದ್ದಲ್ಲಿ ಯಾವ ದಿನಾಂಕದಂದು ಮಾಹಿತಿ ಪಡೆಯಲಾಗಿದೆ? (ಮಾಹಿತಿ ನೀಡುವುದು)

## ವೀರ ಮರಣ ಹೊಂದಿದ ಯೋಧರಿಗೆ ಸಮಾನದ ಪರಿಹಾರದ ಮೊತ್ತ ಹಾಗೂ ಸವಲತ್ತುಗಳನ್ನು ನೀಡುವ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೨೫೦ (೩೫೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದ ಎಷ್ಟು ಜನ ಯೋಧರು ೨೦೧೧ ರಿಂದ ಇಲ್ಲಿಯವರೆಗೆ ವೀರ ಮರಣವನ್ನು ಹೊಂದಿರುತ್ತಾರೆ; (ವಿಳಾಸ ಸಮೇತ ವಿವರವಾದ ಮಾಹಿತಿ ನೀಡುವುದು)

(ಆ) ವೀರ ಮರಣ ಹೊಂದಿದ ಯೋಧರಿಗೆ ಕರ್ನಾಟಕ ಸರ್ಕಾರವು ಯಾವ ಹಣಕಾಸು ಹಾಗೂ ಇತರೆ ಸವಲತ್ತುಗಳನ್ನು ನೀಡಿದೆ: (ವಿವರವಾಗಿ ತಿಳಿಸುವುದು)

(ಇ) ವೀರ ಮರಣ ಹೊಂದಿದ ಎಲ್ಲಾ ಯೋಧರಿಗೆ ಸಮನಾಗಿ ಸವಲತ್ತುಗಳನ್ನು ನೀಡಲಾಗಿದೆಯೇ; (ವಿವರವಾದ ಮಾಹಿತಿ ಕೊಡುವುದು)

(ಈ) ವೀರ ಮರಣ ಹೊಂದಿದ ಪ್ರತಿಯೊಬ್ಬ ಯೋಧನಿಗೂ ಕೂಡಾ ಸರ್ಕಾರವು ೨೫ ಲಕ್ಷ ರೂ. ನಗದು, ೪ ಎಕರೆ ಕೃಷಿ ಜಮೀನು, ಯೋಧನ ತಾಲ್ಲೂಕಿನ ಕೇಂದ್ರದಲ್ಲಿ ವಾಸಯೋಗ್ಯ ನಿವೇಶನ ಹಾಗೂ ಯೋಧನ ಪತ್ನಿಗೆ ಸರ್ಕಾರಿ ಕೆಲಸ ನೀಡುವ ಯೋಜನೆ ಜಾರಿಯಲ್ಲಿದೆಯೇ;

(ಉ) ಜಾರಿಯಲ್ಲಿ ಇಲ್ಲದಿದ್ದರೆ ಸರ್ಕಾರವು ಇದನ್ನು ಯಾವ ಕಾಲಮಿತಿಯೊಳಗೆ ಜಾರಿಗೊಳಿಸುವುದು?

## ಬದಲಿ ನಿವೇಶನ ನೀಡುವ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೨೫೧ (೩೪೪) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸರ್.ಎಂ. ವಿಶ್ವೇಶ್ವರಯ್ಯ ಬಡಾವಣೆ ವ್ಯಾಪ್ತಿಯಲ್ಲಿ ಪ್ರಾಧಿಕಾರದ ಭೂ ಸ್ವಾಧೀನ ಕ್ರಮದಿಂದ ರೆವಿನ್ಯೂ ನಿವೇಶನಗಳನ್ನು ಕಳೆದುಕೊಂಡ ರೆವಿನ್ಯೂ ನಿವೇಶನದಾರರು ಪ್ರಾಧಿಕಾರಕ್ಕೆ ನೋಂದಣಿ ಮಾಡಿಸಬೇಕಾಗಿರುವುದು ಕಡ್ಡಾಯವೇ ಅಥವಾ ಐಚ್ಛಿಕವೇ;

(ಆ) ಇದರ ಸಂಬಂಧ ಮೊದಲೇ ಅರ್ಜಿ ಸಲ್ಲಿಸಿದ್ದ ರೆವಿನ್ಯೂ ನಿವೇಶನದಾರರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಯಾವ ರೀತಿ ಮಾಹಿತಿ ತಲುಪಿಸಲಾಯಿತು; ಕೇವಲ ಪತ್ರಿಕಾ ಪ್ರಕಟಣೆ ಹೊರಡಿಸಲಾಯಿತೆ ಅಥವಾ ನೋಂದಣಿ ಅಂಚೆ ಮುಖಾಂತರ ಮಾಹಿತಿ ನೀಡಲಾಯಿತೆ; (ಪತ್ರಿಕಾ ಪ್ರಕಟಣೆಯ ಜೊತೆಗೆ ವಿವರವಾದ ಮಾಹಿತಿ ಕೊಡುವುದು)

(ಇ) ಇಲ್ಲಿಯವರೆಗೆ ಎಷ್ಟು ಜನ ರೆವಿನ್ಯೂ ನಿವೇಶನದಾರರಿಗೆ ಎಲ್ಲಾ ದಾಖಲೆಗಳು ಸರಿ ಇದ್ದರೂ ಕೂಡಾ ನೋಂದಣಿ ಕಾರ್ಡು ನೋಂದಾಯಿಸಿಲ್ಲವೆಂದು ಅವರ ಬದಲಿ ನಿವೇಶನ ಕೋರಿಕೆ ಅರ್ಜಿಯನ್ನು ಎಲೆ ಇಟ್ಟು ಹಿಂಬರಹ ನೀಡಲಾಗಿದೆ; (ವಿವರವಾಗಿ ಹೆಸರು, ವಿಳಾಸ, ಮೊಬೈಲ್ ಸಂಖ್ಯೆಗಳನ್ನು ಒಳಗೊಂಡಂತೆ ವಿವರವಾದ ಮಾಹಿತಿ ನೀಡುವುದು)

(ಈ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಿರುದ್ಧ ಜುಂಜಮ್ಮ ಪ್ರಕರಣದಲ್ಲಿ ಮಾನ್ಯ ಉಚ್ಚನ್ಯಾಯಾಲಯದ ಆದೇಶ ಎನು? (ಆದೇಶದ ಪ್ರತಿ ನೀಡುವುದು)

## ಮೂವರು ಹಿರಿಯ ಐ.ಎ.ಎಸ್. ಅಧಿಕಾರಿಗಳ ಮೇಲಿನ ಆರೋಪಗಳ ಬಗ್ಗೆ

**ಶ್ರೀ ಗೋ. ಮಧುಸೂಧನ್ (ಪದವೀಧರರ ಕ್ಷೇತ್ರ):–**

೨೫೨ (೩೫೫) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಿರಿಯ ಐ.ಎ.ಎಸ್. ಅಧಿಕಾರಿಗಳಾದ ಶ್ರೀ ಪಿ.ಎಸ್. ವಸ್ತ್ರದ, ಶ್ರೀಮತಿ ಸಾವಿತ್ರಿ ಮತ್ತು ಶ್ರೀಮತಿ ಅಮೀತಾ ಪ್ರಸಾದ್ ಇವರುಗಳ ಮೇಲಿರುವ ಆರೋಪಗಳೇನು; (ವಿವರ ನೀಡುವುದು)

(ಆ) ಇಲಾಖಾ ತನಿಖೆ ಪ್ರಾರಂಭವಾಗಿದೆಯೇ; ಆಗಿದ್ದಲ್ಲಿ, ಯಾವ ಹಂತದಲ್ಲಿದೆ; (ತನಿಖಾಧಿಕಾರಿ ಹಾಗೂ ಮಂಡನಾಧಿಕಾರಿಗಳ ವಿವರ ನೀಡುವುದು)

(ಇ) ಆರೋಪಗಳಿಗೆ ಈ ಅಧಿಕಾರಿಗಳು ತಮ್ಮ ಸಮರ್ಥನೆಗೆ ನೀಡಿರುವ ಉತ್ತರಗಳ ಪ್ರಮುಖಾಂಶಗಳನ್ನು ನೀಡುವುದು?

# ಕರ್ನಾಟಕ ಲೋಕಾಯುಕ್ತ ದಾಳಿಗಳಲ್ಲಿ ವಶ ಪಡಿಸಿಕೊಂಡಿರುವ ಆಸ್ತಿಗಳ ಬಗ್ಗೆ

**ಶ್ರೀ ಗೋ. ಮಧುಸೂಧನ್ (ಪದವೀಧರರ ಕ್ಷೇತ್ರ):–**

೨೫೩ (೩೫೮) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಲೋಕಾಯುಕ್ತ ಪ್ರಾರಂಭವಾದಗಿನಿಂದ ಈವರೆವಿಗೂ ನಡೆಸಿರುವ ದಾಳಿಗಳಲ್ಲಿ ವಶಪಡಿಕೊಳ್ಳಲಾಗಿರುವ ಒಟ್ಟು ಸ್ಥಿರ, ಚರ ಆಸ್ತಿಗಳ ಮೌಲ್ಯವೆಷ್ಟು;

(ಆ) ಈ ರೀತಿಯ ವಶಪಡಿಸಿಕೊಂಡಿರುವ ಚಿನ್ನ, ಬೆಳ್ಳಿ, ವಜ್ರ, ವೈಡೂರ್ಯ ಮುಂತಾದ ಆಭರಣಗಳ ಮೌಲ್ಯ ಎಷ್ಟು; ಈ ಆಭರಣಗಳನ್ನು ಯಾರ ವಶದಲ್ಲಿ ಸುಭದ್ರವಾಗಿ ಇಡಲಾಗಿದೆ; (ವಿವರ ನೀಡುವುದು)

(ಇ) ಇಂತಹ ದಾಳಿಗಳಲ್ಲಿ ಈವರೆವಿಗೂ ವಶಪಡಿಸಿಕೊಳ್ಳಲಾಗಿರುವ ಹಣದ ಮೊತ್ತ ಎಷ್ಟು; ಈ ಮೊತ್ತವನ್ನು ಎಲ್ಲಿ ಜಮಾಗೊಳಿಸಲಾಗಿದೆ;

(ಈ) ದಾಳಿಗಳಲ್ಲಿ ವಶಪಡಿಸಿಕೊಳ್ಳಲಾಗಿರುವ ಸ್ಥಿರ ಆಸ್ತಿಗಳ ಬಗ್ಗೆ ಯಾವ ಕ್ರಮುವಹಿಸಲಾಗಿದೆ ಇಂತಹ ಆಸ್ತಿಗಳನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳಲು ಲೋಕಾಯುಕ್ತ ಕಾಯಿದೆಯಲ್ಲಿ ಅವಕಾಶ ಕಲ್ಪಿಸಲಾಗಿದೆಯೇ? (ವಿವರ ನೀಡುವುದು)

## ಮೈಸೂರು ನಗರದ ಎ.ಟಿ.ಐ. ನಲ್ಲಿನ ಭ್ರಷ್ಟಾಚಾರದ ಪ್ರಕರಣಗಳ ಬಗ್ಗೆ

**ಶ್ರೀ ಗೋ. ಮಧುಸೂಧನ್ (ಪದವೀಧರರ ಕ್ಷೇತ್ರ):–**

೨೫೪ (೩೫೪) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ನಗರದ ಎ.ಟಿ.ಐ. ನಲ್ಲಿ ನಡೆದಿದೆ ಎನ್ನಲಾಗಿರುವ ಭ್ರಷ್ಟಾಚಾರದ ತನಿಖೆಗಾಗಿ ಯಾರನ್ನು ನೇಮಿಸಲಾಗಿತ್ತು ಅವರು ನೀಡಿದ್ದ ವರದಿಯು ಸರ್ಕಾರದ ಕೈಸೇರಿದೆಯೇ; ಸೇರಿದ್ದಲ್ಲಿ, ವರದಿಯ ಪ್ರಮುಖ ಅಂಶಗಳೇನು;

(ಆ) ಇದೇ ವಿಷಯವಾಗಿ ಮತ್ತೋರ್ವ ಐ.ಎ.ಎಸ್. ಅಧಿಕಾರಿಯವರನ್ನು ತನಿಖೆ ನಡೆಸಲು ಸರ್ಕಾರ ನೇಮಿಸಿದೆಯೇ; ಹಾಗೂ ಇವರು ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆಯೇ; ಸಲ್ಲಿಸಿದ್ದಲ್ಲಿ, ವರದಿಯ ಪ್ರಮುಖಾಂಶಗಳೇನು? (ವಿವರ ನೀಡುವುದು)

## ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳ ವಿರುದ್ಧದ ಪ್ರಕರಣಗಳ ಬಗ್ಗೆ

**ಶ್ರೀ ಗೋ. ಮಧುಸೂಧನ್ (ಪದವೀಧರರ ಕ್ಷೇತ್ರ):–**

೨೫೫ (೩೫೭) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೨ ವರ್ಷಗಳಲ್ಲಿ ರಾಜ್ಯದ ಎಷ್ಟು ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್., ಮತ್ತು ಕೆ.ಎ.ಎಸ್., ಕೆ.ಎಫ್.ಎಎಸ್. ಶ್ರೇಣಿಯ ಆಧಿಕಾರಿಗಳ ಮೇಲೆ ಭ್ರಷ್ಟಾಚಾರ, ಕರ್ತವ್ಯ ಲೋಪ ಮತ್ತಿತರ ಪ್ರಕರಣಗಳು ದಾಖಲಾಗಿವೆ; (ಶ್ರೇಣಿವಾರು ಪ್ರಕರಣವಾರು, ಹೆಸರು ಸಹಿತ ವಿವರ ನೀಡುವುದು)

(ಆ) ಇಂತಹ ಪ್ರಕರಣಗಳಲ್ಲಿ ಎಷ್ಟು ಅಧಿಕಾರಿಗಳ ಮೇಲೆ ಎಫ್.ಐ.ಆರ್. ದಾಖಲಾಗಿದೆ; ಎಷ್ಟು ಪ್ರಕರಣಗಳಲ್ಲಿ ಆರೋಪ ಪಟ್ಟಿ ಸಲ್ಲಿಸಲಾಗಿದೆ; (ಪ್ರಕರಣವಾರು, ಅಧಿಕಾರಿವಾರು ವಿವರ ನೀಡುವುದು)

(ಇ) ಮೇಲ್ಕಂಡ ವಿಷಯದಲ್ಲಿ ಎಷ್ಟು ಜನ ಅಧಿಕಾರಿಗಳ ಮೇಲಿನ ಆರೋಪಗಳನ್ನು ಸರ್ಕಾರವು ತಿರಸ್ಕರಿಸಿ, ಲೋಕಾಯುಕ್ತರಿಗೆ ಅನುಮತಿ ನಿರಾಕರಿಸಿದೆ; (ಅಂತಹ ಪ್ರತಿಯೊಂದು ಅಧಿಕಾರಿಯ ಹೆಸರು, ಪದನಾಮ, ಆರೋಪ ಮತ್ತು ಅನುಮತಿ ನಿರಾಕರಣೆಗೆ ಕಾರಣ ಸಹಿತ ವಿವರ ನೀಡುವುದು)

## ಐ.ಎ.ಎಸ್. ಅಧಿಕಾರಿಗಳ ವರ್ಗಾವಣಾ ಪ್ರಾಧಿಕಾರದ ಬಗ್ಗೆ

ಶ್ರೀ ಗೋ. ಮಧುಸೂಧನ್ (ಪದವೀಧರರ ಕ್ಷೇತ್ರ) :–

೨೫೬ (೩೫೩) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದೇಶದ ಇತರ ರಾಜ್ಯದಲ್ಲಿರುವಂತೆ, ಕರ್ನಾಟಕ ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಐ.ಎ.ಎಸ್. ಅಧಿಕಾರಿಗಳ ವರ್ಗಾವಣೆ ಪ್ರಾಧಿಕಾರ ರಚಿಸಲಾಗಿದೆಯೇ; ಈ ಶ್ರೇಣಿಯ ಅಧಿಕಾರಿಗಳ ವರ್ಗಾವಣೆಯನ್ನು ಹಾಲಿ ಯಾವ ರೀತಿ ಕ್ರಮ ವಹಿಸಲಾಗುತ್ತಿದೆ;

(ಆ) ಕರ್ನಾಟಕ ರಾಜ್ಯಕ್ಕೆ ಮಂಜೂರಾಗಿರುವ ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್. ಹುದ್ದೆಗಳ ಸಂಖ್ಯೆ ಎಷ್ಟು; ಪ್ರಸ್ತುತ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು;

(ಇ) ರಾಜ್ಯದಲ್ಲಿ ಎಷ್ಟು ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್. ಅಧಿಕಾರಿಗಳ ಸೇವೆಯನ್ನು ಕೇಂದ್ರದ ಸೇವೆಗೆ ಕಳುಹಿಸಿಕೊಡಲಾಗಿದೆ? (ವಿವರ ನೀಡುವುದು)

## ಬೀದರ ಜಿಲ್ಲೆಯ ಮುಜರಾಯಿ ದೇವಸ್ಥಾನ ಅಭಿವೃದ್ಧಿ ಕುರಿತು

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೫೭ (೨೦೭) ಮಾನ್ಯ ಅಬಕಾರಿ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಗೆ ಒಳಪಡುವ ದೇವಸ್ಥಾನಗಳು ಎಷ್ಟು;

(ಆ) ಈ ದೇವಸ್ಥಾನಗಳಿಗೆ ಬರುವ ಭಕ್ತಾಧಿಗಳಿಗೆ ಸರ್ಕಾರ ಮೂಲಭೂತ ಸೌಕರ್ಯಗಳನ್ನು ಒದಗಿಸಿದೆಯೇ;

(ಇ) ೨೦೧೪–೨೦೧೫ನೇ ಸಾಲಿನಲ್ಲಿ ಈ ದೇವಸ್ಥಾನಗಳ ಅಭಿವೃದ್ಧಿಗೆ ಬಿಡುಗಡೆ ಮಾಡಿದ ಅನುದಾನ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

## ಬೀದರ ಜಿಲ್ಲೆಯಲ್ಲಿರುವ ಪದವಿ ಕಾಲೇಜುಗಳ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೫೮ (೨೦೮) ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ ಜಿಲ್ಲೆಯಲ್ಲಿರುವ ಪದವಿ ಕಾಲೇಜುಗಳ ಸಂಖ್ಯೆ ಎಷ್ಟು; ಈ ಕಾಲೇಜುಗಳು ಸ್ವಂತ ಕಟ್ಟಡ ಮತ್ತು ಮೂಲಭೂತ ಸೌಲಭ್ಯದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಕಾಲೇಜುಗಳಿಗೆ ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಇದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು?

## ಕಲಬುರಗಿ ಜಿಲ್ಲೆಯ ಒಳಚರಂಡಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮ ನಿರ್ದೇಶನ ಹೊಂದಿದವರು):–**

೨೫೯ (೨೦೯) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಜಿಲ್ಲೆಯಲ್ಲಿ ಒಟ್ಟು ಎಷ್ಟು ಕಿ.ಲೋ.ಮೀಟರ್‌ಗಳಷ್ಟು ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಕಳೆದ ೨ ವರ್ಷಗಳಲ್ಲಿ ಒಳಚರಂಡಿ ಕಾಮಗಾರಿಗಳಿಗಾಗಿ ಒಟ್ಟು ಎಷ್ಟು ಹಣವನ್ನು ಜಿಲ್ಲೆಗೆ ಬಿಡುಗಡೆ ಮಾಡಲಾಗಿದೆ; (ವಿವರ ಒದಗಿಸುವುದು)

(ಇ) ಇಂತಹ ಕಾಮಗಾರಿಗಳಲ್ಲಿ ಪೂರ್ಣಗೊಳ್ಳದೆ ಉಳಿದುಕೊಂಡಿರುವ ಕಾಮಗಾರಿಗಳೇಷ್ಟು; ಸೂಕ್ತ ಕಾರಣ ತಿಳಿಸುವುದು ಹಾಗೂ ಸದರಿ ಕಾಮಗಾರಿಗಳು ಪೂರ್ಣಗೊಳ್ಳುವುದು ಯಾವಾಗ?

## ವೀಸಾ ಅವಧಿ ಮುಗಿದಿದ್ದರೂ ರಾಜ್ಯದಲ್ಲಿರುವ ವಿದೇಶಿಯರ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ ಹೊಂದಿದವರು):–**

೨೬೦ (೨೭೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವೀಸಾ ಅವಧಿ ಮುಗಿದಿದ್ದರೂ ರಾಜ್ಯದಲ್ಲಿ ಅಕ್ರಮವಾಗಿ ಎಷ್ಟು ಜನ ವಿದೇಶಿಯರು ವಾಸ್ತವ್ಯ ಹೂಡಿರುತ್ತಾರೆ;

(ಆ) ವೀಸಾ ಅವಧಿ ಮುಗಿದಿರುವ ವಿದೇಶಿಯರನ್ನು ಅವರ ದೇಶಗಳಿಗೆ ವಾಪಸ್ಸು ಕಳುಹಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ;

(ಇ) ಕೆಲವು ವಿದೇಶಿಯರು ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವುದು ನಿಜವೇ;

(ಈ) ೨೦೧೨ ರಿಂದ ಇದುವರೆವಿಗೂ ಕಾನೂನು ಬಾಹಿರ ಚಟುವಟಿಕೆ ಹಾಗೂ ಬೇರೆ ಬೇರೆ ಪ್ರಕರಣಗಳಲ್ಲಿ ಭಾಗಿಯಾಗಿರುವ ಎಷ್ಟು ಜನ ವಿದೇಶಿಯರ ಮೇಲೆ ಮೊಕದ್ದಮೆ ದಾಖಲಾಗಿರುತ್ತದೆ? (ಪೂರ್ಣ ವಿವರ ನೀಡುವುದು)

## ಬೆಂಗಳೂರು ನಗರದಲ್ಲಿರುವ ಫ್ಲೈಓವರ್‌ಗಳ ನಿರ್ವಹಣೆಯ ಮಾಹಿತಿ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ ಹೊಂದಿದವರು):–**

೨೬೧ (೨೭೭) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನಲ್ಲಿ ಇರುವ ಫ್ಲೈಓವರ್‌ಗಳ ಸಂಖ್ಯೆ ಎಷ್ಟು; (ರಸ್ತೆಗಳ ವಿವರ ನೀಡುವುದು)

(ಆ) ಈ ಫ್ಲೈಓವರ್‌ಗಳ ಉಸ್ತುವಾರಿಯನ್ನು ಯಾವ, ಯಾವ ಇಲಾಖೆಗಳು ನಿರ್ವಹಿಸುತ್ತಿವೆ;

(ಇ) ಈ ಫ್ಲೈಓವರ್‌ಗಳ ನಿರ್ವಹಣೆಯನ್ನು ಯಾವ ರೀತಿ ಮಾಡಲಾಗುತ್ತಿದೆ; (ಸಂಪೂರ್ಣ ವಿವರ ನೀಡುವುದು)

(ಈ) ಹಲವು ಫ್ಲೈಓವರ್‌ಗಳು ಸೂಕ್ತ ನಿರ್ವಹಣೆಯಿಲ್ಲದೆ, ಪಿಲ್ಲರ್‌ಗಳಲ್ಲಿ, ಗೋಡೆಗಳಲ್ಲಿ ಗಿಡ ಮರಗಳು ಬೆಳೆದು ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಯಾವ, ಯಾವ ಫ್ಲೈಓವರ್‌ಗಳಲ್ಲಿ ಎಷ್ಟು ಜಾತಿಯ ಗಿಡ ಮರಗಳು ಬೆಳೆದು ನಿಂತಿವೆ; (ಸಂಪೂರ್ಣ ವಿವರ ನೀಡುವುದು)

(ಊ) ಫ್ಲೈಓವರ್‌ಗಳ ಮೇಲೂ ರಸ್ತೆ ಗುಂಡಿ ತಲೆದೋರಿ, ವಾಹನ ಸವಾರರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

## ಬೆಂಗಳೂರು ನಗರದಲ್ಲಿ ಮೇಲು ಸೇತುವೆ ನಿರ್ಮಾಣದ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ ಹೊಂದಿದವರು):–**

೨೮೨ (೨೭೬) ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರದ ಸಂಚಾರಿ ದಟ್ಟಣೆಯನ್ನು ಕಡಿಮೆ ಮಾಡಲು ಈವರೆವಿಗೆ ಎಷ್ಟು ಮೇಲು ಸೇತುವೆಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ;

(ಆ) ಎಷ್ಟು ಮೇಲು ಸೇತುವೆಗಳ ಕಾಮಗಾರಿ ಪ್ರಗತಿಯಲ್ಲಿರುತ್ತದೆ; ಇದಕ್ಕಾಗಿ ವೆಚ್ಚ ಮಾಡಲಾಗಿರುವ ಹಣವೆಷ್ಟು;

(ಇ) ಈ ಮೇಲು ಸೇತುವೆಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು ಯಾವಾಗ?

# ೨೦೧೪-೧೫ನೇ ಸಾಲಿನಲ್ಲಿ ಕೊಡಗು ಜಿಲ್ಲೆಗೆ ನೀಡಿರುವ ಅನುದಾನದ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೨೬೩ (೬೯) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:-

ಕಳೆದ ೨೦೧೪-೧೫ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಕೊಡಗು ಜಿಲ್ಲೆಗೆ ನೀಡಿರುವ ಅನುದಾನ ಎಷ್ಟು? (ಇಲಾಖೆವಾರು ವಿವರ ನೀಡುವುದು)

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59/ಕಾ.ಸೂ. 0281/1000 ಪ್ರತಿಗಳು/24-02-2016